

# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 37 ಸಂಚಿಕೆ 1 KARMUL/2021/79912 BENGALURU ಏಪ್ರಿಲ್–ಜೂನ್ 2024 ಬೆಲೆ:ರೂ. 10/–







## ಮುಂದಿನ ಕಾರ್ಯಕ್ರಮಗಳು

**ದೀಪ ದುರ್ಗಾ ನಮಸ್ಕಾರ ಪೂಜೆ**
28.07.2024

**ಪ್ರತಿಭಾ ಸ್ಪರ್ಧೆ**
18.08.2024

**ವಾರ್ಷಿಕ ಸರ್ವ ಸದಸ್ಯರ ಸಭೆ**
08.09.2024

**ಪ್ರತಿಭಾ ಮೇಳ ಮತ್ತು ಪುರಸ್ಕಾರ**
15.09.2024

**ಗಣೇಶೋತ್ಸವ**
22.09.2024



*With best compliments from*

# TEDMAG ENGINEERING & MANAGEMENT CONSULTANTS (P) LTD.

Swagat, 1209, 11th Cross
HSR Layout Sector I, Bangalore – 560 102
Tel.: +91 (0)80 22586129
Fax: +91 (0)80 22589134

**E-mail:**
Bangalore : tedmagemc@hotmail.com
sridhar_bhat@yahoo.com
Chennai : myram47@gmail.com
Mumbai : mindi1940@yahoo.com

- MILK PROCESSING
- FOOD PROCESSING
- PLANT TISSUE CULTURE
- ALLIED INDUSTRIES

## EXECUTIVE COMMITTEE MEMBERS 2024-2026

| | |
|---|---|
| **President** | |
| Sri. B Ramachandra Upadhya | 99024 00072 |
| **Vice Presidents** | |
| Sri. P.C Rao | 98444 94630 |
| Sri. K N Adiga Adoor | 96862 04659 |
| **Secretary** | |
| Sri. M Sathyanarayana Bhat | 99458 02607 |
| **Treasurer** | |
| Sri. Gopalakrishna Kunjathaya K | 99801 28059 |
| **Convener, Cultural Committee** | |
| Sri. T S Nagaraja Upadhyaya | 93412 26763 |
| **Convener, Religious Committee** | |
| Sri. Y Jayantha Rao | 94482 74519 |
| **Convener, Youth Wing** | |
| Sri. Gururaj Pejavar | 98440 09293 |
| **Convener, Membership Development Committee** | |
| Sri. M Dinesh Rao | 99456 88955 |
| **Convener, Public Relation Wing** | |
| Sri. M K Gurumurthy | 98440 22692 |
| **Convener, Community Services Wing** | |
| Sri. A Sandeep Rao | 98450 98150 |
| **Convener, Media & Communication Wing** | |
| Sri. Ranjith Yadapadithaya | 95919 94646 |
| **Convener, Education Assistance Programme** | |
| Sri. Y Radhakrishna | 98440 58851 |
| **Editor, Bhrugu Vani** | |
| Sri. Maroli Krishna Prasad | 98450 18183 |
| **Members/Co-opted Members** | |
| Sri. S Haridas Upadhya | 94480 01892 |
| Sri. M Mohan Rao | 98453 79955 |
| Sri. H Ramesh Bhat | 98450 24708 |
| Sri. P N Vishnumurthy Kuddannaya | 94803 05426 |
| Dr. ( Smt) Veena Sharath | 99860 80271 |
| Smt. Madhavi Ballal | 99860 39107 |
| **Past Presidents /Permanent Invitees** | |
| Sri. S T R Mady | 99029 77948 |
| Sri. U A P Ballal | 99860 28602 |
| Sri. K Vasudeva Rao | 98450 57111 |
| Sri. P S Bagilthaya | 98440 83582 |
| Smt. Geetha Vasudeva Rao | 94499 23456 |
| Smt. S Vijayalakshmi Bhat | 98441 52107 |
| **Invitee Members** | |
| Sri. Y Shreepathi Bhat | 98441 52107 |
| Sri. S N Sharathchandra | 98860 40271 |
| Sri. U V Krishna Murthy | 98440 24136 |
| Sri. S Jayaprakash Mady | 98450 09669 |
| Sri. B S Balachandra Tolpady | 94481 34268 |
| Sri. K Prakash Bhat | 98455 06777 |
| Sri. Madhava Upadhya | 94480 41424 |
| Sri. Matti Ramachandra Rao | 94486 70741 |
| Sri. B Sudhindra Rao | 98459 99229 |
| Sri. K Rajesh Bhat | 98443 89699 |
| Smt. Sudha M Rao | 99011 27738 |
| Smt. Geetha P R Rao | 99459 38411 |
| Smt. Vijayalaksmi Upadhya | 94496 55453 |
| Smt. Meena Mahabaleshwara | 98456 21250 |
| Smt. Shobha Radhakrishna | 98447 25547 |
| Smt. Sowmya K V | 98862 00062 |

## ಒಳಪುಟಗಳಲ್ಲಿ....


ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಸೂಚನಾ ಪತ್ರ 2
ಅಧ್ಯಕ್ಷರ ನುಡಿ ... ... 3
Editorial ... ... 5
ಸದಸ್ಯ ಸಮುದಾಯವೇ ಬಳಗದ ವಿರಾಟ್ ಶಕ್ತಿ ... 7
ದೀಪ ದುರ್ಗಾ ನಮಸ್ಕಾರ ಪೂಜೆ ... ... 10
ಕವನಗಳು ... ... 11
ವಸಂತ ಸಂಭ್ರಮೋತ್ಸವ ... ... 15
ವಿಶೇಷ ದಿನಗಳು ... ... 16
ಶುಭ ವಿವಾಹಗಳು ... ... 17
ಕಾರ್ಯಕಾರಿ ಸಮಿತಿ 2024–26 ... ... 18
ಬ್ಯಾಲೆನ್ಸ್ ಶೀಟ್ ... ...20–23
ಪ್ರತಿಭಾ ಸ್ಪರ್ಧೆ .... ... 24
ಪ್ರತಿಭಾ ಮೇಳ ಮತ್ತು ಪುರಸ್ಕಾರ ... ... 25
ಮಹಾವಿಷ್ಣುವಿನ ಎಂಟನೆಯ ಅವತಾರ ... ... 27
ಪರಮ ಪವಿತ್ರ ರಕ್ಷಾಕವಚ – ಯಜ್ಞೋಪವೀತ ... 29
ಶ್ರೀ ಗಣೇಶೋತ್ಸವ ... ... 31
ಸುಂದರಕಾಂಡದ ಹೆಸರಿನ ವೈಶಿಷ್ಟ್ಯ ... ... 32


ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ ವಿನಃ ಸಂಪಾದಕ ಮಂಡಳಿಯದ್ದಲ್ಲ.

ಸ್ಥಳಾಭಾವದ ಕಾರಣದಿಂದಾಗಿ ಕೆಲವು ಲೇಖನಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲು ಸಾಧ್ಯವಾಗಿಲ್ಲ. ಅವುಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುತ್ತೇವೆ.

### ಶುಭಾಶಯಗಳು

ಭೃಗುವಾಣಿಯ ಸಮಸ್ತ ಓದುಗ ಬಂಧುಗಳಿಗೆ, ಜಾಹೀರಾತುದಾರರಿಗೆ ಮತ್ತು ಆನಂದ ಬಳಗದ ಎಲ್ಲಾ ಸದಸ್ಯ ಬಾಂಧವರಿಗೆ ಶುಭಹಾರೈಕೆಗಳು.

ಸಂಪಾದಕ ಮಂಡಳಿ

# ಆನಂದ ಬಳಗ (ರಿ)

**ಹೋಟೆಲ್ ಅಜಂತಾ ಆವರಣ, 22 'ಎ', ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560 001**

## ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಸೂಚನಾ ಪತ್ರ

ಆನಂದ ಬಳಗ (ರಿ) ಬೆಂಗಳೂರು ಇದರ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು **ದಿನಾಂಕ 08–09–2024ರ ಭಾನುವಾರ ಬೆಳಿಗ್ಗೆ 10.00 ಗಂಟೆಗೆ** ಸರಿಯಾಗಿ **ಬೆಂಗಳೂರಿನ ಮಹಾತ್ಮಾ ಗಾಂಧಿ ರಸ್ತೆಯಲ್ಲಿರುವ ಅಜಂತಾ ಹೋಟೆಲಿನ ಸಭಾಂಗಣ**ದಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಿ, ಪರಿಶೀಲಿಸಿ ಅಂಗೀಕರಿಸಲು ಕರೆಯಲಾಗಿದೆ.

1. ಪ್ರಾರ್ಥನೆ
2. ಸಭೆಯ ಅಧಿಕೃತ ಚಾಲನೆ – ಅಧ್ಯಕ್ಷರಿಂದ
3. ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲಿಸುವುದು
4. ಸ್ವಾಗತ ಭಾಷಣ
5. 2023–24ನೇ ಸಾಲಿನಲ್ಲಿ ಅಗಲಿದ ಬಳಗದ ಸದಸ್ಯರಿಗೆ ಶ್ರದ್ಧಾಂಜಲಿ.
6. 2022–23ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನಡವಳಿಕೆಯನ್ನು ಓದಿ ಪರಿಶೀಲಿಸಿ ದಾಖಲಿಸುವುದು ಮತ್ತು ಅಂಗೀಕರಿಸುವುದು.
7. 2023–24ನೇ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಓದಿ, ಪರಿಶೀಲಿಸಿ ದಾಖಲಿಸುವುದು ಮತ್ತು ಅಂಗೀಕರಿಸುವುದು.
8. 31 ಮಾರ್ಚ್ 2024ರಂದು ಮುಕ್ತಾಯವಾದ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳ ಮಂಡನೆ, ಚರ್ಚೆ, ಪರಿಶೀಲನೆ ಮತ್ತು ಅಂಗೀಕಾರ.
9. 2024–25ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕ.
10. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ ಬಗ್ಗೆ ಪ್ರಸ್ತಾವನೆ ಮತ್ತು ವಿಚಾರ ವಿನಿಮಯ
11. ಅಧ್ಯಕ್ಷರ ಮಾತು
12. ವಂದನಾರ್ಪಣೆ

ಸದಸ್ಯರು ಅಧಿಕ ಸಂಖ್ಯೆಯಲ್ಲಿ ಈ ಸಭೆಯಲ್ಲಿ ಹಾಜರಿರಬೇಕಾಗಿ ಕೋರಿಕೆ.

**ಬೆಂಗಳೂರು**
**ದಿನಾಂಕ : 15.07.2024**

**ಎಂ. ಸತ್ಯನಾರಾಯಣ ಭಟ್**
ಕಾರ್ಯದರ್ಶಿ

### ವಿಶೇಷ ಸೂಚನೆಗಳು

1. ಪ್ರಶ್ನೆಗಳನ್ನು ಕೇಳಬಯಸುವ ಸದಸ್ಯರು ಮಹಾಸಭೆಯ ಒಂದು ವಾರದ ಮುಂಚಿತವಾಗಿ ತಮ್ಮ ಪ್ರಶ್ನೆಗಳನ್ನು ಲಿಖಿತ ಮುಖೇನ ಆನಂದ ಬಳಗದ ಕಛೇರಿಗೆ ಕಳುಹಿಸತಕ್ಕದ್ದು. ಪ್ರಶ್ನೆ ಕೇಳುವವರು ಸಭೆಯಲ್ಲಿ ಖುದ್ದು ಹಾಜರಿರತಕ್ಕದ್ದು.
2. 2023–24ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಪ್ರತಿಯನ್ನು ಸದಸ್ಯರು ಬಳಗದ ಕಛೇರಿಯಿಂದ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ (ರಜಾ ದಿನಗಳನ್ನು ಹೊರತುಪಡಿಸಿ) ಪಡೆಯಬಹುದು.

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 37 ಸಂಚಿಕೆ 01

**ಅಧ್ಯಕ್ಷರು**
ಬಾಳೆಕುದ್ರು ರಾಮಚಂದ್ರ ಉಪಾಧ್ಯ

**ಕಾರ್ಯದರ್ಶಿ**
ಎಂ. ಸತ್ಯನಾರಾಯಣ ಭಟ್

**ಸಂಪಾದಕರು**
ಮರೋಳಿ ಕೃಷ್ಣ ಪ್ರಸಾದ್

**ಸಂಪಾದಕ ಮಂಡಳಿ**
ಎಸ್. ಹರಿದಾಸ ಉಪಾಧ್ಯ
ಕೆ.ಎನ್. ಅಡಿಗ

**ವರದಿ ಲೇಖನ ಸಹಕಾರ**
ಟಿ.ಎಸ್.ನಾಗರಾಜ ಉಪಾಧ್ಯಾಯ
ಡಾ. ವೀಣಾ ಶರತ್
ಡಿ. ಶರತ್ ಕುಮಾರ್

**ಜಾಹೀರಾತು ಸಮನ್ವಯ**
ಗೋಪಾಲಕೃಷ್ಣ ಕುಂಜತ್ತಾಯ
ಎಂ.ಕೆ. ಗುರುಮೂರ್ತಿ
ವೈ. ಜಯಂತ್ ರಾವ್

**ಛಾಯಾಗ್ರಹಣ**
ಮಟ್ಟಿ ರಾಮಚಂದ್ರ ರಾವ್

**ಪ್ರಸಾರಣ ಸಹಕಾರ**
ರಂಜಿತ್ ಯಡಪಡಿತ್ತಾಯ

ವಿಳಾಸ
**ಆನಂದ ಬಳಗ**
ಹೋಟೆಲ್ ಅಜಂತಾ ಆವರಣ
22ಎ, ಎಂ.ಜಿ. ರಸ್ತೆ
ಬೆಂಗಳೂರು – 560 001
ದೂರವಾಣಿ : 2559 4457

website
www.anandabalaga.org



# ಅಧ್ಯಕ್ಷರ ನುಡಿ

ಆನಂದ ಬಳಗದ ಸರ್ವ ಸದಸ್ಯರಿಗೆ ಕ್ರೋಧಿ ಸಂವತ್ಸರದ ಶುಭ ಹಾರೈಕೆಗಳು.

ಕೇಂದ್ರದಲ್ಲಿ ನೂತನ ಸರಕಾರ ಅಸ್ತಿತ್ವಕ್ಕೆ ಬಂದಿದೆ. ಪ್ರಧಾನಮಂತ್ರಿಗಳಾಗಿ ಮೂರನೆಯ ಬಾರಿಗೆ ಪ್ರಮಾಣವಚನ ಸ್ವೀಕರಿಸಿರುವ ಮಾನನೀಯ ಶ್ರೀ ನರೇಂದ್ರ ಮೋದಿಯವರಿಗೆ ಮತ್ತು ಅವರ ಸಂಪುಟ ಸಹೋದ್ಯೋಗಿಗಳಿಗೆ ಬಳಗದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಕೇಂದ್ರದಲ್ಲಿ ನೂತನ ಸರಕಾರದ ಆಡಳಿತದಲ್ಲಿ ನಮ್ಮ ಭಾರತ ದೇಶವು ಜಾಗತಿಕ ಮಟ್ಟದಲ್ಲಿ ಹೊಸ ಎತ್ತರವನ್ನು ಕಾಣಲಿ ಎಂದು ಶುಭ ಹಾರೈಸುತ್ತೇವೆ.

ಆನಂದ ಬಳಗದ ನೂತನ ಕಾರ್ಯಕಾರಿ ಸಮಿತಿಯು ಅಸ್ತಿತ್ವಕ್ಕೆ ಬಂದಿದೆ. ನೂತನ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಮಾರ್ಗದರ್ಶನದಲ್ಲಿ ಬಳಗವು ಸಮಾಜಕ್ಕೆ ವಿವಿಧ ಬಗೆಯಲ್ಲಿ ಹೆಚ್ಚಿನ ಸೇವೆ ಸಲ್ಲಿಸುವಲ್ಲಿ ಯಶಸ್ಸನ್ನು ಕಾಣಲಿ, ಇನ್ನಷ್ಟು ಮಂದಿ ಬಳಗವನ್ನು ಸೇರಲಿ, ಬಳಗವು ಬೆಳೆಯಲಿ ಎಂದು ಆಶಯ.

ಬಳಗದ ಮುಖವಾಣಿಯಾದ ಭೃಗುವಾಣಿ ತ್ರೈಮಾಸಿಕ ಪತ್ರಿಕೆಯ ನೂತನ ಸಂಪಾದಕರಾಗಿ ಉತ್ಸಾಹಿ, ಕ್ರಿಯಾಶೀಲ, ಉದ್ಯಮಿ ಶ್ರೀ ಎಂ. ಕೃಷ್ಣಪ್ರಸಾದರು ನಿಯೋಜಿತರಾಗಿದ್ದಾರೆ. ಮಾಜಿ ಸಂಪಾದಕರುಗಳಾದ ಶ್ರೀ ಎಸ್. ಹರಿದಾಸ ಉಪಾಧ್ಯರು, ಶ್ರೀ ಎಂ. ಸತ್ಯನಾರಾಯಣ ಭಟ್ಟರು, ಶ್ರೀ ಡಿ. ಶರತ್ ಕುಮಾರ್ ಭಟ್ಟರು ಸೇರಿದಂತೆ ಹಲವು ಉತ್ಸಾಹಿ ಬರಹಗಾರರು ಮತ್ತು ಕ್ರಿಯಾಶೀಲ ಕಾರ್ಯಕರ್ತರು ಪತ್ರಿಕಾ ಬಳಗದಲ್ಲಿದ್ದಾರೆ.

ಪತ್ರಿಕೆಯು ನೂತನ ಪ್ರಯೋಗಗಳಿಗೆ ತೆರೆದುಕೊಳ್ಳಲಿ. ದೇವರನ್ನು ಹೊರುವ ಪಲ್ಲಕಿಯ ರೀತಿಯಲ್ಲಿ ಪತ್ರಿಕೆಯ ವೆಚ್ಚವನ್ನು ಹೊರುವುದಕ್ಕೆ ಬೇಕಾದ ಜಾಹೀರಾತುಗಳು ಬಳಗದ ಸದಸ್ಯರು ಮತ್ತು ಮಿತ್ರಕ್ಷೇತ್ರಗಳ ಉದ್ಯಮದಾರರ ಮೂಲಕ ಹರಿದು ಬರಲಿ, ವರ್ಣರಂಜಿತ ವಿಷಯಗಳೊಂದಿಗೆ ಪತ್ರಿಕೆಯು ಸಂಪನ್ನವಾಗಲಿ ಎಂದು ಹಾರೈಕೆ.

ಬಳಗದ ಧಾರ್ಮಿಕ ವಿಭಾಗದ ಮತ್ತು ಯುವ ವಿಭಾಗದ ವತಿಯಿಂದ ಮುಂದಿನ ತಿಂಗಳುಗಳಲ್ಲಿ ನಡೆಯಲಿರುವ ದೀಪ ದುರ್ಗಾ ನಮಸ್ಕಾರ ಪೂಜೆ ಮತ್ತು ಗಣೇಶೋತ್ಸವ ಕಾರ್ಯಕ್ರಮಗಳಿಗೆ ಎಲ್ಲ ಸದಸ್ಯರೂ ಬನ್ನಿ, ಭಾಗವಹಿಸಿ, ಯಶಸ್ಸಿನಲ್ಲಿ ಕಾರ್ಯಭಾಗಿಗಳಾಗಿ, ಕೃತಾರ್ಥರಾಗಿ ಎಂದು ಕೋರುತ್ತೇನೆ.

–ಬಾ. ರಾಮಚಂದ್ರ ಉಪಾಧ್ಯ

FRIDGE HOUSE
DELIVERING TRUST

COPELAND

# FRIDGE HOUSE
## Wholesaler & Importers

**M/s Copeland India Pvt. Ltd.**
**M/s Gujarat Flurochemicals Ltd.**
**M/s Hicool Electronic Industries**

DAIKIN

GFL


Scroll


Sealed


Semi Hermetic


Scroll Condensing Unit


Dixell Controls


Tie


Fan & Motor
Hicool


Split AC


Copper pipes &
Insulation Materials

**EQUIPMENTS & COMPONENTS. for**

***HVAC & R, *COLD ROOMS, *RIPENING CHAMBERS, *HEAT PUMPS.**

Adithya Tower # 23, V.S.N Road, Shivaji Nagar, Bengaluru - 560 051.
Ph. No. 080-22861936, 22860260 & 41238022
Email : info@fridgehouse.net ; Web Site: www. fridgehouse.net
Contact Persons : M.K. Prasad & Nagesh D Prabhu - M: 9845217197



# EDITORIAL...

At the outset I thank Ananda Balaga Committee for having selected me as the Editor of Bhruguvani for the term 2024-26 and given an opportunity to serve 2200+ member families. With my earlier experience as Editor in another Magazine with the support of Bhruguvani Editorial Committee I intend to publish the magazine to the liking of the members.

I have the support of a well-qualified Editorial Committee and past editors of Bhruguvani in selecting articles. I request the Balaga and their family members to send articles for publishing in Bhruguvani. The articles should be original and not copied from anywhere else. The articles should be in line of our culture, history, spirituality and on religion, festivals, short stories, travelogues, business, investment, humor and general articles of interest to members. The choice of articles is the prerogative of the Editorial Committee.

Writing is a skill which can be developed and regular writing helps in streamlining our thinking process, thereby helping us achieve success in life. I request members to develop this skill and make attempt to write articles. We also intend to publish the rewards, awards, recognitions, and accolades won by you and your family members. We will also publish weddings, upanayana, housewarming and other functions held in your member families.

In this issue, we have published the list of members of Executive Committee of Ananda Balaga. These members are working on a voluntary basis to run our Association and they deserve an appreciation. You can approach them for clarifications and information regarding Balaga activities.

We look forward for the future 3 months, the rains will start receding and many important festivals like Durganamaskara Pooja, Ganeshotsava will be celebrated. Pratibha mela and Prathiba puraskara will be held. I request all members to participate in the functions and be blessed by the almighty. Bring your children for every event and festival celebration. The celebrations are display of our culture and rituals. Imbibing our rituals and culture in young minds will build a strong personality.

**Maroli Krishna Prasad**

*Editor*

ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯ ಸೇವಾ ಸಂಸ್ಥೆ

HOTEL AJANTHA HOSPITALITY SERVICES

# HOTEL AJANTHA

A Boarding and Lodging Hotel of repute with spacious place for parking
Party Halls and all facilities












**No. 22-A, Mahatma Gandhi Road, Bengaluru - 560 001**
Phone : 080-25584321 / 22 / 23 / 24 / 25, | 32711260
Email : reservation@hotelajantha.in
www.hotelajantha.in



# ಸದಸ್ಯ ಸಮುದಾಯವೇ ಬಳಗದ ವಿರಾಟ್ ಶಕ್ತಿ

**ಬಾ. ರಾಮಚಂದ್ರ ಉಪಾಧ್ಯ**

ಆನಂದ ಬಳಗದ ಅಧ್ಯಕ್ಷರಾಗಿ ಎರಡನೇ ಅವಧಿಗೆ ಸರ್ವಾನುಮತದಿಂದ ಆಯ್ಕೆಯಾಗಿರುವ ಶ್ರೀ ಬಾ. ರಾಮಚಂದ್ರ ಉಪಾಧ್ಯರವರು ತಮ್ಮ ಮೊದಲ ಎರಡು ವರ್ಷಗಳಲ್ಲಿ ಆನಂದ ಬಳಗವನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗುವಲ್ಲಿ ಯಶಸ್ಸನ್ನು ಕಂಡ ಜನಾನುರಾಗಿ ಸಂಘಟನಾ ಚತುರರು. ಬಳಗದ ನೇತೃತ್ವವನ್ನು ಮತ್ತೊಮ್ಮೆ ವಹಿಸಿಕೊಂಡಿರುವ ಹಿನ್ನೆಲೆಯಲ್ಲಿ ಅಧ್ಯಕ್ಷರು ಭೃಗುವಾಣಿ ಬಳಗದೊಂದಿಗೆ ಕೆಲವೊಂದು ವಿಚಾರಗಳನ್ನು ಮತ್ತು ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ. ಭೃಗುವಾಣಿಯ ಸಂಪಾದಕರಾದ ಶ್ರೀ ಎಂ. ಕೃಷ್ಣ ಪ್ರಸಾದ್, ಸಂಪಾದಕ ಮಂಡಳಿ ಸದಸ್ಯರಾದ ಡಾ. ಕೆ.ಎನ್. ಅಡಿಗ ಅಡೂರು ಮತ್ತು ಶ್ರೀ ಎಂ. ಸತ್ಯನಾರಾಯಣ ಭಟ್‌ರವರು ಮಾಡಿರುವ ಸಂದರ್ಶನದ ಆಯ್ದ ಭಾಗವನ್ನು ಪ್ರಸ್ತುತಪಡಿಸುತ್ತಿದ್ದೇವೆ.

**– ಸಂಪಾದಕರು**

**ನಮ್ಮೆಲ್ಲರ ಅಭಿಮಾನದ ಆನಂದ ಬಳಗದ ಅಧ್ಯಕ್ಷರಾಗಿ ಎರಡನೇ ಅವಧಿಗೆ ಆಯ್ಕೆಯಾಗಿರುವುದಕ್ಕೆ ಭೃಗುವಾಣಿಯ ಅಭಿನಂದನೆಗಳು. ತಮ್ಮ ಕುಟುಂಬದ ಹಿನ್ನೆಲೆ ಮತ್ತು ಬಾಲ್ಯದ ಬಗ್ಗೆ ಸ್ವಲ್ಪ ಹೇಳಬಹುದೇ?**

ಪ್ರಪ್ರಥಮವಾಗಿ ನಿಮ್ಮ ಅಭಿಮಾನ ಮತ್ತು ಅಭಿನಂದನೆಗೆ ಧನ್ಯವಾದ. ಭೃಗುವಾಣಿಯ ನೂತನ ಸಂಪಾದಕರಾಗಿ ನೇಮಕವಾಗಿರುವ ಕ್ರಿಯಾಶೀಲ ವ್ಯಕ್ತಿ ಎಂ. ಕೃಷ್ಣ ಪ್ರಸಾದ್ ಮತ್ತು ಸಂಪಾದಕ ಮಂಡಳಿಯ ಎಲ್ಲರಿಗೂ ಶುಭಾಶಯಗಳು ಹಾಗೂ ತಮ್ಮ ನೇತೃತ್ವದಲ್ಲಿ ಬಳಗದ ಮುಖವಾಣಿಯಾಗಿರುವ ಪತ್ರಿಕೆ ಮತ್ತಷ್ಟು ಸುಂದರವಾಗಿ ಮೂಡಿಬರಲಿ ಎಂದು ಹಾರೈಸುತ್ತೇನೆ.

ಇತಿಹಾಸ ಪ್ರಸಿದ್ಧವಾದ ಉಡುಪಿ ಜಿಲ್ಲೆಯ ಬಾಳೆಕುದ್ರು ನನ್ನ ಹುಟ್ಟೂರು. ಕೀರ್ತಿಶೇಷ ಹಯಗ್ರೀವ ಉಪಾಧ್ಯ ಮತ್ತು ಯಶೋದಮ್ಮ ದಂಪತಿಗಳ ಮೂವರು ಪುತ್ರರಲ್ಲಿ ನಾನು ಮಧ್ಯದವನು. ನಮ್ಮ ತೀರ್ಥರೂಪರು ಕೃಷಿಕರು ಜೊತೆಯಲ್ಲಿ ಹೋಟೆಲ್ ಉದ್ಯಮವನ್ನು ನಡೆಸುತ್ತಿದ್ದರು. ನಿಸರ್ಗದ ಮಡಿಲಿನಲ್ಲಿ ಬಾಲ್ಯದ ದಿನಗಳನ್ನು ಕಳೆದ ನೆನಪು ಸದಾ ಹಸಿರಾಗಿದೆ. ನಗರದ ಮಕ್ಕಳು ಇದರಿಂದ ವಂಚಿತರಾಗಿ ಒಂದು ರೀತಿಯ ಜೈಲು ವಾಸವನ್ನು ಮಾನಸಿಕವಾಗಿ ಅನುಭವಿಸುವುದನ್ನು ನೋಡಿದಾಗ ಹಳ್ಳಿಯ ಪರಿಸರದ ಮಹತ್ವ ಅರಿವಾಗುತ್ತದೆ. ಇರಲಿ, ಅದು ಅಂದಿಗೆ ಚಂದ. ಇದು ಇಂದಿಗೆ ಅಂದ... ಅಲ್ಲವೇ....?

**ತಾವು ಸ್ವಂತ ಪರಿಶ್ರಮದಿಂದ ಹೋಟೆಲು ಉದ್ಯಮವನ್ನು ಆರಂಭಿಸಿ, ಬೆಳೆಸಿ, ಆತಿಥ್ಯ ಉದ್ಯಮಕ್ಕೆ ಹೊಸ ಆಯಾಮ ನೀಡಿದ ಯಶಸ್ವೀ ಹೋಟೆಲು ಉದ್ಯಮಿ ಎಂದು ಗುರುತಿಸಿ ಕೊಂಡಿರುವುದು ನಮಗೆಲ್ಲಾ ಹೆಮ್ಮೆಯ ವಿಷಯ. ತಾವು ನಾಲ್ಕು ಜನರಿಗೆ ಊಟೋಪಚಾರ ಮಾಡುವ ಈ ಉದ್ಯಮವನ್ನೇ ಆಯ್ಕೆ ಮಾಡಿರುವ ಹಿನ್ನೆಲೆ...?**

ಈಗಾಗಲೇ ಹೇಳಿದಂತೆ ನಮ್ಮ ತಂದೆಯವರು ಹೋಟೆಲು ನಡೆಸುತ್ತಿದ್ದರು. ಅವರ ಅಕಾಲಿಕ ನಿಧನದ ನಂತರ ನಾವು ಸಹಜವಾಗಿ ಇದೇ ಕ್ಷೇತ್ರವನ್ನು ಆಯ್ಕೆ ಮಾಡುವುದು ಅನಿವಾರ್ಯವಾಯಿತು. ಊರು ಬಿಟ್ಟು ಬೆಂಗಳೂರಿಗೆ ಸೇರಿ ಕೆಲವಾರು ಹೋಟೆಲುಗಳಲ್ಲಿ ಕೆಲಸ ಮಾಡುವ ಮೂಲಕ ಈ ಉದ್ಯಮದ ಸೂಕ್ಷ್ಮ ವಿಚಾರಗಳನ್ನು, ಆಳ ಅಗಲವನ್ನು ಅರಿಯುವ ಪ್ರಯತ್ನ ಸಾಗುತ್ತಲೇ ಇತ್ತು. ನನ್ನ ಪ್ರಕಾರ ಹೊಟ್ಟೆ ಪಾಡಿಗೆ ಮಾಡಿದರೆ ಹೋಟೆಲು ಕೆಲಸ; ಹೋಟೆಲ್ ಪ್ರಾರಂಭಿಸುವ ಗುರಿ ಉಳ್ಳವರಿಗೆ ಇದು 'ವೃತ್ತಿ

ತರಬೇತಿ'. ಸಾಕಷ್ಟು ಅವಧಿಯ 'ವೃತ್ತಿ ತರಬೇತಿ' ನಂತರ ಪ್ರಾರಂಭಿಸಿದ ಮೊದಲ ಹೋಟೆಲು 'ಪ್ರಥಮ ಚುಂಬನಂ, ದಂತ ಭಗ್ನಂ' ಎಂಬಂತೆ ಕೆಲ ಸಮಯದಲ್ಲೇ ಮುಚ್ಚುವಂತಾಯಿತು. ಆಗಿರುವ ತಪ್ಪಿನಿಂದ ಪಾಠ ಕಲಿತು, ಛಲ ಬಿಡದೆ ನನ್ನ ಅಣ್ಣ ದಿ. ಕೃಷ್ಣಮೂರ್ತಿ ಉಪಾಧ್ಯರೊಂದಿಗೆ ಒಂದೊಂದೇ ಹೋಟೆಲುಗಳನ್ನು ನವದೆಹಲಿ, ಆಗಿನ ಮದರಾಸು ಸೇರಿದಂತೆ ವಿವಿಧ ಸ್ಥಳಗಳಲ್ಲಿ ಸ್ಥಾಪಿಸಿ, ಒಟ್ಟಿಗೆ 15 ಶಾಖೆಗಳು ನಡೆಯುತ್ತಿದ್ದವು. ಕಾಲಕ್ರಮೇಣ ಅನಿವಾರ್ಯವಾಗಿ ಹಲವು ಹೋಟೆಲುಗಳು ಸ್ಥಗಿತಗೊಂಡವು. 1977ರಲ್ಲಿ ಬೆಂಗಳೂರು ವಿಲ್ಸನ್ ಗಾರ್ಡನ್‌ನಲ್ಲಿ ಆರಂಭಿಸಿದ ಪೂರ್ಣಿಮಾ ಹೋಟೆಲು ಮಾತ್ರ 2019ರ ಕೊರೋನಾ ಲಾಕ್‌ಡೌನ್‌ವರೆಗೆ ಸಾಂಗವಾಗಿ ಕಾರ್ಯನಿರ್ವಹಿಸಿದ್ದು, ನಾಲ್ಕು ದಶಕಗಳಲ್ಲಿ ಶುಚಿ–ರುಚಿಯಾದ ತಿಂಡಿ–ತಿನಿಸುಗಳು, ನಿರ್ಮಲವಾದ ಪರಿಸರ ಹಾಗೂ ಸ್ನೇಹಪರ ಸೇವೆಗಳ ಮೂಲಕ ಗ್ರಾಹಕರ ಮನ ಗೆದ್ದು ಆತಿಥ್ಯೋದ್ಯಮ ವಲಯದಲ್ಲಿ ಒಂದು ಲ್ಯಾಂಡ್‌ಮಾರ್ಕ್ ಎನಿಸಿಕೊಂಡಿದೆ. ಇದೇ ಜಾಗದಲ್ಲಿ ಈಗ ಪೂರ್ಣಿಮಾ ರಿಜೆನ್ಸಿ ಎಂಬ ವಸತಿ ಗೃಹ ಯಶಸ್ವಿಯಾಗಿ ನಡೆಯುತ್ತಿದೆ.



**ಅದು ಸರಿ. ಆದರೆ ತಾವು ಆಯುರ್ವೇದ ಔಷಧ ಉದ್ಯಮಕ್ಕೆ ಪ್ರವೇಶಿಸಿದ್ದು ಹೇಗೆ... ಏಕೆ?**

ಆಯುರ್ವೇದ ನಮ್ಮ ರಕ್ತದಲ್ಲೇ ಬಂದ ಗುಣ. ನಮ್ಮ ಹಿರಿಯರು ಆಯುರ್ವೇದ ಪಂಡಿತರಾಗಿದ್ದರು. ಔಷಧ ತಯಾರಿಕೆ ಉದ್ಯಮವನ್ನು ಪ್ರಾರಂಭಿಸುವ ಆಲೋಚನೆ ಯಲ್ಲಿದ್ದಾಗ ಪ್ರಸಿದ್ಧ ಔಷಧ ತಯಾರಿಕಾ ಸಂಸ್ಥೆಯೊಂದಿಗೆ ಸಂಪರ್ಕ ಬೆಳೆದು, ನಾವು ಔಷಧ ಹಂಚಿಕೆದಾರರಾಗಿ ಬದಲಾಗ ಬೇಕಾಯಿತು. ಹೀಗಾಗಿ ಉಪಾಧ್ಯ ಮತ್ತು ಕಂಪೆನಿ ಎನ್ನುವ ಹೆಸರಿನಿಂದ ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ನಂತರದಲ್ಲಿ ಉಪಾಧ್ಯ ಆಯುರ್ವೇದ ಭಂಡಾರ ಎನ್ನುವ ಹೆಸರಿನಿಂದ ಬೆಂಗಳೂರು ನಗರದಲ್ಲಿ ಹಲವಾರು ಶಾಖೆಗಳನ್ನು ಆರಂಭಿಸಲಾಯಿತು. ಆರೋಗ್ಯ ಅಭಿಮಾನಿ ದೇವತೆಯಾದ ಶ್ರೀ ಧನ್ವಂತರಿ ಅನುಗ್ರಹದಿಂದ ಈ ಉದ್ಯಮ ಸುಸಾಂಗವಾಗಿ ನಡೆಯುತ್ತಾ ಇದೆ. ಉದ್ಯಮದಲ್ಲಿ ಸಮಸ್ಯೆಗಳು ಇಲ್ಲವೆಂದಲ್ಲ. ಇರುವ ಸವಾಲುಗಳನ್ನು ಅವಕಾಶಗಳನ್ನಾಗಿ ಮಾರ್ಪಡಿಸುವ ಚಾಣಾಕ್ಷತನ ನಮ್ಮಲ್ಲಿರಬೇಕಷ್ಟೇ.

**ಬಿಡುವಿರದ ವೃತ್ತಿ – ಜೀವನದ ಮಧ್ಯೆಯೂ ತಾವು ಹಲವಾರು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದೀರಿ... ಅನೇಕ ಸಂಘ ಸಂಸ್ಥೆಗಳನ್ನು ಪೋಷಿಸಿಕೊಂಡು ಮುನ್ನಡೆಸುತ್ತಿದ್ದೀರಿ... ಇದರಲ್ಲಿ ಆಸಕ್ತಿ ಹೇಗೆ ಬೆಳೆಯಿತು..?**

ಹೋಟೆಲು ಉದ್ಯಮ ಜನರ ಸಂಪರ್ಕಕ್ಕೆ ಅತ್ಯಂತ ಸೂಕ್ತವಾದ ಮಾಧ್ಯಮ. ಅದರಿಂದಾಗಿ ನನಗೆ ಕನ್ನಡದ ಕಟ್ಟಾಳು ಮ. ರಾಮಮೂರ್ತಿ, ಅನಕೃ ಮೊದಲಾದವರ ಪರಿಚಯವಾಗಿ ಅವರು ಮಾಡುತ್ತಿರುವ ಕನ್ನಡ–ಪರ ಕೆಲಸದಲ್ಲಿ ಶಕ್ತ್ಯಾನುಸಾರ ಕೈ ಜೋಡಿಸುವ ಸದವಕಾಶ ಲಭಿಸಿತು. ಕನ್ನಡ ಸಾಹಿತ್ಯ ಪರಿಷತ್, ಜಯನಗರ ಶಾಖೆಯ ಕಾರ್ಯದರ್ಶಿಯಾಗಿ ಒಂಭತ್ತು ವರ್ಷ ಕಾರ್ಯ ನಿರ್ವಹಿಸಿ, ಎರಡು ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸುವ ಅವಕಾಶ ಲಭಿಸಿತು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸದಸ್ಯನಾಗಿ ಹಾಗೂ ವಿವಿಧ ಸಮಿತಿಯ ಮುಖ್ಯಸ್ಥನಾಗಿ ಕನ್ನಡ ನುಡಿಯ ಪರಿಚಾರಿಕೆ ಈಗಲೂ ನಡೆಯುತ್ತಿದೆ. ಕರ್ನಾಟಕ ಪ್ರದೇಶ ಹೋಟೆಲು ಮತ್ತು ರೆಸ್ಟೋರೆಂಟ್ ಸಂಘ (ಕೆಪಿಹೆಚ್‌ಆರ್‌ಎ) ದಲ್ಲಿ ಕಾರ್ಯದರ್ಶಿಯಾಗಿ, ಕೆಪಿಹೆಚ್‌ಆರ್‌ಎ ವಾರ್ತೆಯ ಸಂಪಾದಕನಾಗಿ ಹಾಗೂ ಎರಡು ಅವಧಿಯಲ್ಲಿ ಈ ಸಂಘದ ಅಧ್ಯಕ್ಷನಾಗಿ ಹೋಟೆಲು ಉದ್ಯಮದ ಒಳಿತಿಗಾಗಿ ಕಂಕಣಬದ್ಧನಾಗಿ ಶ್ರಮಿಸಿದ ತೃಪ್ತಿಯೂ ಇದೆ. ಔಷಧ ಉದ್ಯಮ ಆದುದರಿಂದ ಅದಕ್ಕೆ ಪೂರಕವಾಗಿ ಆಯುರ್ವೇದ ಚಿಕಿತ್ಸಾ

> **'ಆನಂದ ಬಳಗಕ್ಕೆ ಸೇರಿ ಆನಂದ ಮಿಲನದಲ್ಲಿ ಸಂಭ್ರಮಿಸಿ, ಕ್ರೀಡಾ ಮಿಲನದಲ್ಲಿ ಸ್ಪರ್ಧಿಸಿ ಪ್ರತಿಭೆಗಳನ್ನು ಪ್ರದರ್ಶಿಸಿ, ಪ್ರತಿಭಾ ಮೇಳದಲ್ಲಿ ಮೆರೆಯಿರಿ. ಗಣೇಶೋತ್ಸವದಲ್ಲಿ ಗಣನಾಥನನ್ನು ಆರಾಧಿಸಿ, ದೀಪ ದುರ್ಗಾ ನಮಸ್ಕಾರದಲ್ಲಿ ಪಾಲ್ಗೊಂಡು ಜಗನ್ಮಾತೆಯ ಪರಮಾನುಗ್ರಹಕ್ಕೆ ಪಾತ್ರರಾಗಿ. ಶುಭಮಸ್ತು.** – ಬಾ. ರಾಮಚಂದ್ರ ಉಪಾಧ್ಯ

'ಅಧ್ಯಕ್ಷ ಸ್ಥಾನ ಕೇವಲ ಅಲಂಕಾರಿಕ ಮಾತ್ರ. ಬಳಗದ ಪ್ರತಿಯೊಬ್ಬ ಸದಸ್ಯರ ಸಹಕಾರ, ಕಾರ್ಯಕಾರಿ ಸಮಿತಿಯ ಸಕಾಲಿಕ ಬೆಂಬಲ, ವಿವಿಧ ಉಪವಿಭಾಗಗಳ ಜವಾಬ್ದಾರಿಯುತ ಕಾರ್ಯನಿರ್ವಹಣೆ ಮಹಿಳಾ ವಿಭಾಗದ ನಿಸ್ವಾರ್ಥ ಸೇವಾ ಮನೋಭಾವ ಇವುಗಳಿಂದ ಇಂದು ಬಳಗ ಈ ಮಟ್ಟಿಗೆ ಬೆಳೆದಿದೆ. ಬಳಗದಿಂದ ಯಾರೂ ಏನನ್ನೂ ಅಪೇಕ್ಷಿಸದೆ, ಬಳಗಕ್ಕೆ ನಾವೇನು ನೀಡಬಲ್ಲೆವು ಎಂದು ಸದಾ ಯೋಚಿಸಿ, ಕಾರ್ಯ ಪ್ರವೃತ್ತರಾಗುವ ಎಲ್ಲರ ಮನೋಭಾವ ಬಳಗದ ವಿರಾಟ್ ಶಕ್ತಿ ಮತ್ತು ಅಮೂಲ್ಯ ಆಸ್ತಿ.

– ಬಾ. ರಾಮಚಂದ್ರ ಉಪಾಧ್ಯ

ಶಿಬಿರ, ಉಚಿತ ನೇತ್ರ ಚಿಕಿತ್ಸೆ, ನಿಸರ್ಗ ಚಿಕಿತ್ಸೆ ಮೊದಲಾದ ನೂರಾರು ಉಚಿತ ಶಿಬಿರಗಳೂ ಶಕ್ತ್ಯಾನುಸಾರ ನಡೆಯುತ್ತಾ ಇವೆ.

**ತಾವು ಈಗ ಆನಂದ ಬಳಗದ ಅಧ್ಯಕ್ಷ ಸ್ಥಾನವನ್ನು ಏರಿದ್ದೀರಿ. ಈ ಬಳಗಕ್ಕೆ ಸದಸ್ಯರಾಗಿ ಸೇರಿದ್ದು ಯಾವಾಗ.... ಸ್ವ–ಆಸಕ್ತಿಯಿಂದಲೋ... ಅಥವಾ ಯಾರದೋ ಒತ್ತಾಯಕ್ಕಾಗಿಯೋ...**

ನನಗೆ ಸಮಾಜಮುಖಿ ಕಾರ್ಯ ಚಟುವಟಿಕೆಗಳಲ್ಲಿ ಸದಾ ಆಸಕ್ತಿ. ಬಳಗದ ಪ್ರಾರಂಭಿಕ ದಿನಗಳಲ್ಲಿ ದಿ. ನರಸಿಂಹ ರಾಯರು ನಮ್ಮೂರಿನವರನ್ನು ಸಂಪರ್ಕಿಸಿ, ಬಳಗಕ್ಕೆ ಸದಸ್ಯರಾಗಿ ಸೇರಿಸುವಲ್ಲಿ ಅವಿರತವಾಗಿ ಶ್ರಮಿಸುತ್ತಿದ್ದರು. ಇವರು ಪ್ರಸ್ತಾಪಿಸಿದ ಕೂಡಲೇ ಸದಸ್ಯನಾದೆ. ಮೊದಲ ಸಲ ಬಂದಾಗಲೇ ಕಾರ್ಯಕಾರಿ ಸಮಿತಿಗೆ ಸೇರಿಸಿಕೊಂಡರು. ಆ ನಂತರ ಬಳಗದ ಒಡನಾಟ ವೃದ್ಧಿಸುತ್ತಾ ಬಂತು. ಧಾರ್ಮಿಕ ವಿಭಾಗದ ಸಂಚಾಲಕನಾಗಿ, ಉಪಾಧ್ಯಕ್ಷನಾಗಿ ಶಕ್ತ್ಯಾನುಸಾರ ಕೆಲಸ ಮಾಡಿದ್ದೇನೆ. ಇದೀಗ ಅಧ್ಯಕ್ಷ ಸ್ಥಾನ ಬಂದಿದೆ. ಇದರಲ್ಲಿ ನನ್ನದೇನೂ ಹೆಚ್ಚುಗಾರಿಕೆ ಇಲ್ಲ. ಬಳಗದ ಸದಸ್ಯರ ಅಭಿಮಾನ ದೊಡ್ಡದು. ಜೊತೆಗೆ ವಿವಿಧ ಉಪ ವಿಭಾಗಗಳು ತಮ್ಮ ಕಾರ್ಯನಿರ್ವಹಣೆಯನ್ನು ಅಚ್ಚುಕಟ್ಟಾಗಿ ಮಾಡುತ್ತಿವೆ.

**ಬಳಗದ ಯುವ ಜನರು, ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳಬೇಕು ಅನ್ನಿಸ್ತಾ ಇಲ್ವಾ. ಈ ನಿಟ್ಟಿನಲ್ಲಿ ಏನಾದರೂ ಹೊಸ ಯೋಜನೆ ಇದೆಯಾ..?**

ನೂರಕ್ಕೆ ನೂರು ಇದು ಅಗತ್ಯ. ಮಕ್ಕಳು, ಯುವ ಜನರು ಹೆಚ್ಚಾಗಿ ಪಾಲ್ಗೊಳ್ಳಲೇಬೇಕು. ಆಗಲೇ ಯಾವುದೇ ಸಂಘ ಅಪ್‌ಡೇಟ್ ಆಗಿರಲು ಸಾಧ್ಯ. ಸರಾಗವಾಗಿ ಮುಂದುವರಿಯಲು ಸಾಧ್ಯ. ಇದರ ಕಡೆ ತೀವ್ರ ಗಮನ ನೀಡಲಾಗುತ್ತಿದೆ. ಯುವ ವಿಭಾಗ ವಿಶೇಷವಾಗಿ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ. ಯುವ ಜನರಿಗೆ ಪ್ರಿಯವಾಗುವ, ಅವರ ಆಸಕ್ತಿಗೆ ಅನುಗುಣವಾದ ಚಟುವಟಿಕೆಗಳನ್ನು ಬಳಗದ ಧ್ಯೇಯ–ಧೋರಣೆಗಳ ಚೌಕಟ್ಟಿನಲ್ಲಿ ಅಳವಡಿಸಬೇಕಾಗಿದೆ. ಪ್ರತಿಯೊಬ್ಬ ಸದಸ್ಯರೂ ಅವರ ಮಕ್ಕಳನ್ನು ಕಾರ್ಯಕ್ರಮಕ್ಕೆ ಬರುವಾಗ ಜೊತೆಯಲ್ಲಿ ಕರೆದುಕೊಂಡು ಬಂದರೆ ಮಕ್ಕಳಲ್ಲೂ ಸಹಜವಾಗಿ ಆಸಕ್ತಿ, ಕುತೂಹಲ ಬೆಳೆಯುತ್ತದೆ. ನಮ್ಮ ಮನೆಯಲ್ಲಂತೂ ನನ್ನ ಸಹ ಧರ್ಮಿಣಿ, ಮೂವರು ಪುತ್ರರು, ಸೊಸೆಯಂದಿರು ಮಾತ್ರವಲ್ಲ ಮೊಮ್ಮಕ್ಕಳೂ ಬಳಗದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ಇದು ಇತರರಿಗೆ ಸ್ಫೂರ್ತಿಯಾಗಬಹುದು.

**ಬಳಗಕ್ಕೆ ಈಗ 36 ವರ್ಷ... 14 ವರ್ಷದ ನಂತರ ಸುವರ್ಣ ಮಹೋತ್ಸವ. ಆ ಸಂದರ್ಭದಲ್ಲಿ ಬಳಗ ಹೇಗಿರಬೇಕು ಎಂದು ತಮ್ಮ ಅಭಿಲಾಷೆ, ಕನಸು......**

ಬಳಗದ 50ರ ಸಂಭ್ರಮದಲ್ಲಿ ನಾವೆಲ್ಲರೂ ಪಾಲ್ಗೊಳ್ಳುವಂತಾಗಬೇಕು. ದೇವರು ಆರೋಗ್ಯ ಪೂರ್ಣ ಆಯಸ್ಸು ನೀಡಬೇಕು. 36 ವರ್ಷದ ಸಾಧನೆಗೆ ಮತ್ತಷ್ಟು ವೇಗೋತ್ಕರ್ಷ ಲಭಿಸಬೇಕು. ಬಳಗ ಬೃಹತ್ ಆಲದ ಮರದಂತೆ ಎಲ್ಲರಿಗೂ ಆಸರೆ ನೀಡಬೇಕು. ಮುಂದಿನ ವರ್ಷಗಳಲ್ಲಿ ಇದು ಖಂಡಿತಾ ಸಾಧ್ಯ ಎಂದು ತನ್ನ ಬಲವಾದ ಅನಿಸಿಕೆ. ಬಳಗದ ವಿವಿಧ ಉಪ ವಿಭಾಗಗಳು ಯಾವುದೇ ಫಲಾಪೇಕ್ಷೆ ಇಲ್ಲದೆ ತಮ್ಮ ಜವಾಬ್ದಾರಿಗಳನ್ನು ಶಕ್ತಿ ಮೀರಿ ನಿರ್ವಹಿಸುತ್ತಿವೆ. ಮಹಿಳಾ ವಿಭಾಗವು ಬಳಗಕ್ಕೆ ಕಿರೀಟಪ್ರಾಯವಾಗಿದೆ. ಅವರು ಹಲವಾರು ವರ್ಷಗಳಿಂದ ನಡೆಸುತ್ತಿರುವ ವಧು–ವರಾನ್ವೇಷಣೆ ಸೇವೆ ಬಹಳ ಜನರಿಗೆ ಉಪಯೋಗವಾಗುತ್ತಿದೆ. ಸಂಘ ಸಂಸ್ಥೆಗಳೆಂದರೆ ನಿರಂತರ ಹರಿಯುವ ನೀರಿನ ತೊರೆಗಳಂತೆ. ಕಾಲಕ್ಕನುಗುಣವಾಗಿ ಸಂಘದ ಪದಾಧಿಕಾರಿಗಳು ಸಂದರ್ಭೋಚಿತ ನಿರ್ಣಯವನ್ನು ತೆಗೆದುಕೊಳ್ಳುವುದು ಅಪೇಕ್ಷಣೀಯ. ಬಳಗದ ಸರ್ವ ಸದಸ್ಯರ ಆದರ್ಶ, ಅಭಿಮಾನ ಮತ್ತು ಸಹಕಾರದಿಂದ ಆನಂದ ಬಳಗ ಮುಂದಿನ ದಿನಗಳಲ್ಲಿ ಸಮೃದ್ಧವಾಗಿ ಬೆಳೆಯಲಿ, ದೇಶ ವಿದೇಶಗಳಲ್ಲಿ ಬಳಗದ ಕೀರ್ತಿ ಹರಡಲಿ ಎಂದು ನನ್ನ ಆಶಯ.

❖



# ದೀಪ ದುರ್ಗಾ ನಮಸ್ಕಾರ ಪೂಜೆ



## ಆನಂದ ಬಳಗ–ಧಾರ್ಮಿಕ ವಿಭಾಗ

॥ ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ ॥
॥ ಶರಣ್ಯೇ ತ್ರ್ಯಂಬಕೇ ದೇವೀ ನಾರಾಯಣೀ ನಮೋಸ್ತುತೇ॥

ಸದಸ್ಯ ಬಂಧುಗಳೇ,

ಕಲಿಯುಗದಲ್ಲಿ ಶೀಘ್ರ ಫಲವನ್ನು ನೀಡುವ ಶ್ರೀ ದುರ್ಗಾಮಾತೆಯ ಆರಾಧನೆಯು ನಿಮಗೆ, ನಮಗೆ ಮತ್ತು ಬಳಗಕ್ಕೆ ಶ್ರೇಯಸ್ಕರ. ಈ ಹಿನ್ನಲೆಯಲ್ಲಿ ಕೆಲವಾರು ವರ್ಷಗಳಿಂದ ನಮ್ಮ ಬಳಗವು ಪ್ರತಿವರ್ಷವೂ ಸಾಮೂಹಿಕ ದೀಪದುರ್ಗಾ ನಮಸ್ಕಾರ ಪೂಜೆಯನ್ನು ನಡೆಸುತ್ತಾ ಬಂದಿದೆ. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಧನ್ಯತೆ ಪಡೆಯುತ್ತಿದ್ದಾರೆ.

ಅದರಂತೆ ಈ ವರ್ಷವೂ 28.7.2024, ಭಾನುವಾರ, ಸಂಜೆ 4.25ರಿಂದ ಬಳಗದ ಧಾರ್ಮಿಕ ವಿಭಾಗದ ನೇತೃತ್ವದಲ್ಲಿ ಇತರ ವಿಭಾಗಗಳ ಸಹಯೋಗದಲ್ಲಿ ಏರ್ಪಡಿಸಿರುವ ಈ ಕಾರ್ಯಕ್ರಮದಲ್ಲಿ ಸದಸ್ಯ ಬಂಧುಗಳೆಲ್ಲರೂ ಪಾಲ್ಗೊಂಡು ಶ್ರೀದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರುತ್ತೇವೆ.

**ದಿನಾಂಕ 28–7–2024, ಭಾನುವಾರ ಸಾಯಂಕಾಲ 4.25 ಗಂಟೆಯಿಂದ**
**ಸ್ಥಳ : ಆನಂದ ಸಭಾಗೃಹ, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 083**





ದಿವ್ಯ ಉಪಸ್ಥಿತಿ ಮತ್ತು ಅನುಗ್ರಹ ಸಂದೇಶ
**ಉಡುಪಿ ಕಾಣಿಯೂರು ಮಠಾಧೀಶರಾದ**
**ಪರಮಪೂಜ್ಯ ಶ್ರೀ ಶ್ರೀ ಶ್ರೀ**
**ವಿದ್ಯಾವಲ್ಲಭ ತೀರ್ಥ ಶ್ರೀಪಾದರು**



ಸೇವಾವಿವರ :
ಪೂರ್ಣ ಸೇವೆ : ರೂ. 2,000/-, ಪುಷ್ಪಾಲಂಕಾರ : ರೂ. 1500/- ಸೇವಾ ಸಂಕಲ್ಪ : ರೂ. 500/-

| | | |
|---|---|---|
| **ಬಾ.ರಾಮಚಂದ್ರ ಉಪಾಧ್ಯ** | **ಎಂ. ಸತ್ಯನಾರಾಯಣ ಭಟ್** | **ವೈ. ಜಯಂತ್ ರಾವ್** |
| ಅಧ್ಯಕ್ಷರು, ಆನಂದ ಬಳಗ | ಕಾರ್ಯದರ್ಶಿ, ಆನಂದ ಬಳಗ | ಸಂಚಾಲಕರು, ಧಾರ್ಮಿಕ ವಿಭಾಗ |

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**

| | | |
|---|---|---|
| ವೈ. ಜಯಂತ್ ರಾವ್ | ಗುರುರಾಜ ಪೇಜಾವರ್ | ಶ್ರೀಮತಿ ಮೀನಾ ಮಹಾಬಲೇಶ್ವರ್ |
| 94482 74519 | 98440 09293 | 98456 21250 |

ವಿಶೇಷ ಸೂಚನೆ :
* ಸದಸ್ಯರು ಸಾಂಪ್ರದಾಯಿಕ ಉಡುಪಿನಲ್ಲಿ ಆಗಮಿಸಬೇಕಾಗಿ ವಿನಂತಿ.
* ಲಭ್ಯವಿದ್ದರೆ ದುರ್ಗೆಗೆ ಪ್ರಿಯವಾದ ಕೇಪುಳ (ಕಿಸ್ಕಾರ, ಗಿರಿಕರ್ಣಿಕಾ ಎಂಬ ಹೆಸರುಗಳೂ ಇವೆ) ಮತ್ತಿತರ ಹೂವುಗಳನ್ನು ತರಬೇಕಾಗಿ ಕೋರುತ್ತೇವೆ.
* ಪೂಜೆಯ ಬಳಿಕ ಭೋಜನ ವ್ಯವಸ್ಥೆ ಮಾಡಲಾಗಿದೆ.

## ನಮ್ಮ ಆನಂದ ಬಳಗ

ಕನ್ನಡಿಗರ ಹೆಮ್ಮೆಯ ನಮ್ಮ ಬೆಂಗಳೂರು ನಗರ
ಕಲೆ, ವಿದ್ಯೆ, ಸಾಫ್ಟ್‌ವೇರ್, ಹೋಟೆಲ್ಲುಗಳಿಗೆ ಆಗರ
ಜನ ಸೇವೆ ಮಾಡುವುದು ಬಹಳ ಹೋಟೆಲುಗಳು
ದಿನವಿಡೀ ನೀಡುವುವು ಬಗೆ ಬಗೆಯ ತಿನಿಸುಗಳು ॥

ಬಳಗದ ಉದ್ದೇಶ ಸಾಂಸ್ಕೃತಿಕ ಚಟುವಟಿಕೆ
ವಿಧವಿಧದ ಕಾರ್ಯಕ್ರಮ ವರ್ಷದ ಕೊನೆವರೆಗೆ
ಸಂಗೀತ, ನೃತ್ಯ, ಪೂಜೆ, ಹಬ್ಬ ಹರಿದಿನ
ಕ್ರೀಡಾಮಿಲನ, ಪ್ರವಾಸ, ಗಣ್ಯರಿಗೆ ಬಹುಮಾನ ॥

ಪ್ರತಿಭಾ ಮಕ್ಕಳಿಗೆಲ್ಲಾ ಬಹುಮಾನ, ಪುರಸ್ಕಾರ
ವಿಜೃಂಭಣೆಯಿಂದ ನಡೆವುದು ದುರ್ಗಾ ನಮಸ್ಕಾರ
ಮಹಿಳೆಯರಿಂದ ವಧುವರಾನ್ವೇಷಣೆ ಕೇಂದ್ರ
ನೂರಾರು ಜನರಿಗೆ ಒದಗಿಸುವ ಸಲಹಾ ಕೇಂದ್ರ ॥

ಬನ್ನೇರುಘಟ್ಟದ ಸನಿಹ ಬಳಗದ ಕಲ್ಯಾಣ ಮಂಟಪ
ನಡೆವುದು ಆಗಾಗ ಮದುವೆ, ಮುಂಜಿ, ಸಮಾರಂಭ
ಪ್ರತಿ ಸಮಾರಂಭಕ್ಕೂ ಸೇರುವರು ಬಳಗದ ಮಂದಿ
ಆನಂದದಿ ಸವಿಯುವರು ಕೆಲಕಾಲ ಸಂಭ್ರಮದಿ ॥

ಬನ್ನಿರಿ ಬಂಧುಗಳೇ ಬೆಳೆಸಿರೀ ಬಳಗದ
ಸದಸ್ಯರಾಗಿ ಸಹಿತ ಧನ ಸಹಾಯ ನೀಡುವ
ನಮ್ಮೂರ ಬ್ರಾಹ್ಮಣರಿಗಿರುವುದೊಂದೇ ಅವಕಾಶ
ಬೆರೆಯಿರಿ, ಕಲೆಯಿರಿ, ಉಪಯೋಗಿಸಿರಿ ಸದವಕಾಶ ॥

ರಚನೆ: ಪಿ. ವಿಠಲದಾಸ ತಂತ್ರಿ

## ಮಾರ್ದವತೆ

ಎದೆಯಲ್ಲಿ ತುಂಬಿದೆ ಆತಂಕದ ಶರಧಿ,
ಬರಲಿ ಹರುಷವು ನೀಗಿ ಬೇಗುದಿ,
ತರಲಿ ಸಂತಸ ಚಂದ್ರಮನ ಕೌಮುದಿ,
ಆಗಲಿ ಒಡಲ ತಣಿಸುವ ಜಲಧಿ.

ಶಾಂತಿ ನೆಮ್ಮದಿಯ ಗೂಡಾಗಲಿ ಬದುಕು,
ಸಮಾಧಾನದಿ ಸಾಗಿಸುವ ಪರಿಯ ಹುಡುಕು,
ಸಾವಿರದ ಸಂಭ್ರಮ ತುಂಬಲಿ ತನು ಮನಕು ,
ಸೊಬಗಿನ ಸೃಷ್ಟಿಯೆ ವೈಭೋಗದ ತುಣುಕು.

ಬವಣೆಯ ನಿವಾರಿಸಲು ಸೇರಲಿ ಶಕ್ತಿ,
ಭವ ಬಂಧನವ ಬಿಡಿಸುವ ಯುಕ್ತಿ,
ಭಾವದಲೆಯಲಿ ಮಾಡುತಿರು ನಿಯುಕ್ತಿ,
ಅನುಭಾವಿಯಂತೆ ಹೊಂದು ವಿರಕ್ತಿ.

ಒಡಲಿನ ಬೆಂಕಿ ತಣಿಸುವ ರೀತಿ,
ಒಲವಿನ ಅಲೆಯಲಿ ಮೂಡಿದೆ ನೀತಿ,
ಒಸಗೆಯ ತಂದಿತು ಸಡಗರ ಸಂಸ್ಕೃತಿ,
ಓಜಸ್ಸು ಸೇರಲಿ ಮನದಾಳದ ಸುಷುಪ್ತಿ.

ಮುದ್ದು ಮಗುವಿನ ಮುಗ್ಧ ನಗುವು,
ಮಮತೆ ಸೂಸುವ ತಾಯ ಪ್ರೇಮವು,
ಲಾಲಿ ಹಾಡಿದ ಕರುಳ ಕೂಗು,
ಲಾಲೆಯದು ದೇವನದೇ ಸೋಗು.

ಜಯಂತಿ ಮುಚ್ಚಿಂತಾಯ

## ಸನ್ಮಾನ್ಯ ಶ್ರೀ ಪಿ.ಸಿ. ರಾಯರಿಗೆ 70ರ ಸಂಭ್ರಮ



ಆನಂದ ಬಳಗದ ಉಪಾಧ್ಯಕ್ಷರಾದ ಶ್ರೀ ಪಿ.ಸಿ. ರಾಯರ 70ನೇ ವರುಷದ ಆಚರಣೆ 30.06.2024 ಸಂಜೆ ಅರಮನೆ ಮೈದಾನದ ಗಾಯತ್ರಿ ಹಾಲ್‌ನಲ್ಲಿ ಸಂಭ್ರಮದಲ್ಲಿ ಆಚರಿಸಲಾಯಿತು. ಬಳಗದ ಹಲವಾರು ಸದಸ್ಯರು ಮತ್ತು ಹಿತೈಷಿಗಳು ಶ್ರೀ ಪಿ ಸಿ ರಾಯರಿಗೆ ಶುಭ ಹಾರೈಸಿದರು

# ಸದಸ್ಯರಲ್ಲಿ ಮನವಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆಯನ್ನು ಸದಸ್ಯರಿಗೆ ಬಳಗದಲ್ಲಿ ಲಭ್ಯವಿರುವ ವಿಳಾಸದ ಪ್ರಕಾರ ಕಳುಹಿಸಲಾಗುತ್ತಿದೆ. ಆದರೆ ಪ್ರತಿ ಬಾರಿಯೂ ಕೆಲವೊಂದು ಪ್ರತಿಗಳು ವಿಳಾಸ ಪತ್ತೆಯಾಗದೆ ವಾಪಸ್ಸು ಬರುತ್ತಿವೆ. ಸದಸ್ಯರು ತಮ್ಮ ಮನೆಯ ವಿಳಾಸಗಳನ್ನು ಬದಲಿಸಿದಾಗ, ಹೊಸ ವಿಳಾಸವನ್ನು ಬಳಗಕ್ಕೆ ನೀಡದಿರುವುದು ಇದಕ್ಕೆ ಮುಖ್ಯ ಕಾರಣ. ನಮ್ಮ ತಂಡವು ಹಿಂದೆ ಬಂದಿರುವ ಭೃಗುವಾಣಿಯಲ್ಲಿರುವ ಸದಸ್ಯರ ವಿಳಾಸವನ್ನು ಆಧರಿಸಿ, ಹೊಸ ವಿಳಾಸವನ್ನು ತಿಳಿದುಕೊಳ್ಳುವ ಬಗ್ಗೆ ವಿವಿಧ ರೀತಿಯಲ್ಲಿ ಪ್ರಯತ್ನಿಸುತ್ತಿದೆ. ಕೆಲವು ಸಲ ಯಶಸ್ವಿಯೂ ಆಗಿದೆ.

ಸದಸ್ಯ ಬಾಂಧವರಲ್ಲಿ ನಮ್ಮ ವಿನಂತಿಯೇನೆಂದರೆ, ತಮಗೆ ಪರಿಚಯವಿರುವ ಸದಸ್ಯರು ತಮ್ಮ ಮನೆಯ ವಿಳಾಸವನ್ನು ಬದಲಿಸಿರುವುದು ತಮಗೆ ತಿಳಿದಿದ್ದರೆ, ತಮ್ಮ ಗಮನಕ್ಕೆ ಬಂದಿದ್ದರೆ, ಅವರ ಹೆಸರು, ಹೊಸ ವಿಳಾಸ ಅಥವಾ ಅವರ ಮೊಬೈಲ್ ಸಂಖ್ಯೆಯನ್ನು ನಮಗೆ ತಿಳಿಸಿರಿ. ಅಂತಹ ಸದಸ್ಯರ ಸರಿಯಾದ ವಿಳಾಸವನ್ನು ತಿಳಿದು, ನಮ್ಮಲ್ಲಿರುವ ವಿಳಾಸ ಪಟ್ಟಿಯನ್ನು ಪರಿಷ್ಕರಿಸಲು ಇದರಿಂದ ಅನುಕೂಲ. ಜೊತೆಗೆ ಅವರಿಗೆ ಭೃಗುವಾಣಿಯೂ ತಲುಪುತ್ತವೆ. ವಿಳಾಸ ತಿಳಿಯದೆ ಹಿಂದೆ ಬರುವ ಪ್ರತಿಗಳ ಸಂಖ್ಯೆಯೂ ಕಡಿಮೆ ಆಗುತ್ತದೆ.

ಹಾಗೇನೆ ಸದಸ್ಯರು ತಮ್ಮ ವಿಳಾಸವನ್ನು ಬದಲಿಸಿದಾಗ ದಯವಿಟ್ಟು ನಮಗೆ ದೂರವಾಣಿ/ವಾಟ್ಸಪ್ ಮೂಲಕ ತಿಳಿಸಬೇಕಾಗಿ ಕೋರಿಕೆ.

❖ ❖ ❖

ಬಳಗದ ಸದಸ್ಯರು ತಮಗೆ ಪರಿಚಯವಿರುವ ನಮ್ಮ ಸಮಾಜಕ್ಕೆ ಸೇರಿರುವ ಸ್ನೇಹಿತರು, ಬಂಧು ಬಳಗದವರನ್ನು ಬಳಗದ ಸದಸ್ಯರಾಗಲು ಪ್ರೇರೇಪಿಸಿ ಬಳಗದ ಸದಸ್ಯ ಶಕ್ತಿಯನ್ನು ಹೆಚ್ಚಿಸಬೇಕಾಗಿ ವಿನಂತಿ. ಸದಸ್ಯತ್ವದ ಫಾರಂಗಳು www.anandabalaga.org ಯಲ್ಲಿ ಲಭ್ಯವಿದ್ದು, ಫಾರಂ ಭರ್ತಿ ಮಾಡಿ ನಿಗದಿಪಡಿಸಿದ ಶುಲ್ಕದೊಂದಿಗೆ ಕಚೇರಿಗೆ ಸಲ್ಲಿಸಲು ಕೋರಲಾಗಿದೆ.

❖ ❖ ❖

ಬಳಗದ ಅಜೀವ ಸದಸ್ಯತ್ವ ಹೊಂದಿದ್ದ ದಿವಂಗತರಾದ ಸದಸ್ಯರ ಪತ್ನಿ / ಪತಿ ಹಾಗೂ ಮಕ್ಕಳು ಬಳಗದ ಹೊಸ ಸದಸ್ಯತ್ವವನ್ನು ಪಡೆಯಲು ವಿನಂತಿ.

**ದಿನೇಶ್ ರಾವ್ ಎಂ.,**
ಸಂಚಾಲಕರು ಸದಸ್ಯತ್ವ ಅಭಿವೃದ್ಧಿ ವಿಭಾಗ, **ಮೊಬೈಲ್: 99456 88955**



ನಮ್ಮ ಸದಸ್ಯರಾದ ಗಾಯಕಿ ಶ್ರೀಮತಿ ಸುರೇಖಾ ಕೆ.ಎಸ್. ಇವರಿಗೆ 'ಭಾವ ಕೌಸ್ತುಭ ಪ್ರಶಸ್ತಿ' ಗಾನ ಸಂಭ್ರಮ ಟ್ರಸ್ಟ್ ವತಿಯಿಂದ 29.6.2024 ರಂದು ಪ್ರದಾನ ಮಾಡಲಾಯಿತು



## ಪ್ರಶಸ್ತಿ ಸನ್ಮಾನ ಸಮಾರಂಭ

ದಿನಾಂಕ 30.6.2024ರಂದು ಡಾ. ಅಶ್ವಿನಿ ಭಟ್ ಅವರಿಗೆ ನಿರಂತರ ಅಭಿವೃದ್ಧಿ ಪ್ರಾಧಿಕಾರ ಕರುನಾಡ ಸಾಧಕ ರತ್ನ ಪ್ರಶಸ್ತಿ ನೀಡಿ ಗೌರವಿಸಿತು



ಆನಂದ ಬಳಗದ ಹಿರಿಯ ಸದಸ್ಯರಾದ ಡಾ. ಕೆ.ಪಿ. ಪುತ್ತೂರಾಯರು ಕಳೆದ ಜೂನ್ ತಿಂಗಳು ಬಳಗಕ್ಕೆ ಒಂದು ಲಕ್ಷ ರೂಪಾಯಿ ದೇಣಿಗೆ ಕೊಟ್ಟರು. ಬಳಗದಿಂದ ಅವರಿಗೆ ಧನ್ಯವಾದಗಳು.





ಆನಂದ ಬಳಗದ ಸಕ್ರಿಯ ಸದಸ್ಯರಾದ ಶ್ರೀಮತಿ ಲೀಲಾವತಿ ಉಪಾಧ್ಯಾಯ ಮತ್ತು ಶ್ರೀ ಟಿ.ಎಸ್. ನಾಗರಾಜ ಉಪಾಧ್ಯಾಯ ದಂಪತಿಯವರಿಗೆ ತಾ. 23.06.2024ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಅವರ ಕಲಾ ಸೇವೆಯನ್ನು ಗುರುತಿಸಿ ಆರ್ಯಭಟ 'ಇಂಟರ್‌ನ್ಯಾಷನಲ್ ಪ್ರಶಸ್ತಿ' ನೀಡಿ ಸನ್ಮಾನಿಸಲಾಯಿತು.



ತುಳುವೆರೆಂಕ್ಲು ಸಂಘದ ವತಿಯಿಂದ ಬಿಸು ಹಬ್ಬದ ಆಚರಣೆಯು ದಿ. 09.06.24ರಂದು ನಯನ ಸಭಾಂಗಣದಲ್ಲಿ ಜರುಗಿತು. ಸಂಘದ ಕಾರ್ಯದರ್ಶಿ ಶ್ರೀ ಮಟ್ಟಿ ರಾಮಚಂದ್ರ ರಾವ್‌ರಿಂದ ಪೂಜೆ ನೆರವೇರಿತು.




**REFCON 2024:** A one day Cold Chain Conference was held on 28.06.2024 at Hotel Chancery Pavilion. Mr M. Krishna Prasad was the Chairman for the programme and spoke as the Key Note Speaker. Experts from the field spoke on Technology and Opportunities available for Enterpreuners. The conference was attended by over 120 enterpreuners.



ತಾರೀಕು 05.05.2024ರಂದು ದಕ್ಷಿಣ ಕನ್ನಡಿಗರ ಸಂಘದಿಂದ 'ಯುಗಾದಿ ಸಂಭ್ರಮ ಹಾಗು ಪಂಚಾಂಗ ಶ್ರವಣ' ಕಾರ್ಯಕ್ರಮವು ನಯನ ಸಭಾಂಗಣದಲ್ಲಿ ವಿಜೃಂಭಣೆಯಿಂದ ನೆರವೇರಿತು. ಶ್ರೀ ಶಿವಕುಮಾರ್ ಬೇಗಾರ್ ತಂಡದ 'ಭಸ್ಮಾಸುರ ಮೋಹಿನಿ' ಯಕ್ಷಗಾನ ಪ್ರದರ್ಶನ ಎಲ್ಲರ ಮನಗೆದ್ದಿತು.

*With Best Compliments from :*

## Hotel Sheetal

#32/12, Sheshadri Road
Ananda Rao Circle
Bangalore - 560 009
Ph : 41139560 - 64 | Mobile : 98457 77381






- Food and Drink : Restaurant, Room Service
- Services : Front Door 24x7, Baggage Storage, Lift
  Full-service laundry, House keeping
- Non AC Rooms, Private Bathroom

## Sheetal Residency

#3/1, Old Sawar Lane, Sheshadri Road
Near Sangolli Rayanna Circle
Bangalore - 560 009
Ph : 080 2234 3777 / 80 / 81





- Free Breakfast
- Near Public Transport
- Great Rooms (A/C)
- Great Service
- Free Wi-Fi
- Parking Area

info@sheetalresidency.com www.sheetalresidency.com

ಎ. ಪ್ರಭಾಕರ ರಾವ್, ಮ್ಯಾನೇಜಿಂಗ್ ಪಾರ್ಟ್‌ನರ್

ಶುಭಾಶಯಗಳನ್ನು ಕೋರುವವರು,

॥ ಹರಿಃ ಓಂ ॥

## ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು - 27, ದೂರವಾಣಿ : 22235533, 22241121

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.

ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ

(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

### ಉಪಾಧ್ಯ ಆಯುರ್ವೇದ ಭಂಡಾರ

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು - 560 054
ದೂರವಾಣಿ : 23372422

ಶ್ರೀರಾಂಪುರ : 389, ಮಹಾಕವಿ ಕುವೆಂಪು ರಸ್ತೆ
ನಾಗಪ್ಪ ಬ್ಲಾಕ್, ಬೆಂಗಳೂರು - 21

### ಉಪಾಧ್ಯ ಆಯುರ್ವೇದ ಹೆಲ್ತ್‌ಕೇರ್

ಪೂರ್ಣಿಮ ರಿಜೆನ್ಸಿ ಹತ್ತಿರ, ಸಿದ್ಧಯ್ಯ ರಸ್ತೆ, ಬೆಂಗಳೂರು-27

# ಕ್ರೋಧಿನಾಮ ಸಂವತ್ಸರದ ವಸಂತ ಸಂಭ್ರಮೋತ್ಸವ



ವಿಶ್ವೇಶ್ ಭಟ್

ಆನಂದ ಬಳಗದ ವಸಂತೋತ್ಸವವು ಜೂನ್ 2ನೇ ತಾರೀಕು ಅತ್ಯಂತ ಸಡಗರದಿಂದ ನಡೆಯಿತು. ಪ್ರತಿ ಸಲದಂತೆ ಇದರ ಮುಖ್ಯ ಆಕರ್ಷಣೆಯೇ ಸಾಂಸ್ಕೃತಿಕ ಕಾರ್ಯಕ್ರಮ. ಪುಟಾಣಿ ಆಗಿದ್ದಾಗಿನಿಂದ ಪ್ರತಿಭಾನ್ವಿತಳಾಗಿರುವ ಡಾ. ತುಷಾರ ಆಚಾರ್ಯರನ್ನು ನಾವು ನೋಡುತ್ತಲೇ ಬಂದಿರುತ್ತೇವೆ. ಇವರು ಬಳಗದ ಹಲವು ಕಾರ್ಯಕ್ರಮ, ಸ್ಪರ್ಧೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾ ಬಂದಿದ್ದು ಸಂಗೀತ ಹಾಗೂ ಹರಿಕಥೆಯಲ್ಲಿ ಎತ್ತಿದ ಕೈ.

'ಶ್ರೀನಿವಾಸ ಕಲ್ಯಾಣ' ಹರಿಕಥೆ ನಡೆಸಿಕೊಡುವುದು ಸಾಧಾರಣದ ಮಾತಲ್ಲ. ಹಲವು ಕ್ಲಿಷ್ಟತನವನ್ನು ಹೊಂದಿರುವ ಈ ಪ್ರಸಂಗವನ್ನು ತುಂಬಾ ವಿಭಿನ್ನವಾಗಿ, ಅಚ್ಚುಕಟ್ಟಾಗಿ ಪ್ರಸ್ತುತಪಡಿಸಿದ ಡಾ|| ತುಷಾರ ಎಲ್. ಆಚಾರ್ಯರವರಿಗೆ ಮೊಟ್ಟ ಮೊದಲಿಗೆ ಅಭಿನಂದನೆಗಳು. ಅಭಿನಯ, ವಾಕ್ಚಾತುರ್ಯ, ಹಾಸ್ಯ, ಸಂಗೀತವನ್ನೊಳಗೊಂಡ, ಹರಿಕಥೆಯನ್ನು ಎಲ್ಲ ವಿಭಾಗಗಳಲ್ಲಿಯೂ ಸೂಕ್ತವಾಗಿ ನಡೆಸಿ ಕೊಟ್ಟರು. ಸುಮಾರು ಒಂದೂವರೆ ಗಂಟೆಗಳ ಕಾಲ ತಮ್ಮ ಪ್ರತಿಭೆಯ ಮೂಲಕ ಎಲ್ಲರನ್ನು ಮನೋರಂಜಿಸಿದರು. ಪಕ್ಕವಾದ್ಯದ ಸಂಗೀತಗಾರರಾಗಿ ಹಾರ್ಮೋನಿಯಂನಲ್ಲಿ ಶ್ರೀ ಚನ್ನಕೇಶವ ಮತ್ತು ತಬಲದಲ್ಲಿ ಶ್ರೀ ಪ್ರದೀಪ್ ಉತ್ತಮ ಸಹಕಾರ ಕೊಟ್ಟಿರುತ್ತಾರೆ. ಎಲ್ಲದಕ್ಕಿಂತ ಮಿಗಿಲಾಗಿ ತಾಳದಲ್ಲಿ ಸಹಕಾರ ನೀಡಿದ ಇವರ ತಂದೆ ಶ್ರೀ ಲಕ್ಷ್ಮೀಶ ಆಚಾರ್ಯ ಹಾಗು ಖಂಜೀರದಲ್ಲಿ ಸಾಥ್ ಕೊಟ್ಟ ಇವರ ತಮ್ಮ ಶ್ರೀಪ್ರದ ಆಚಾರ್ಯರವರನ್ನು ಮೆಚ್ಚಲೇಬೇಕು. ಒಂದು ರೀತಿಯಲ್ಲಿ ಇಡೀ ಕುಟುಂಬವೇ ಭಾಗವಹಿಸಿತು.

ಶ್ರೀಮತಿ ಜ್ಯೋತಿ ಭಟ್ ಮತ್ತು ಶ್ರೀ ಬಾಲಕೃಷ್ಣ ಭಟ್‌ರವರ ಹೆಮ್ಮೆಯ ಸುಪುತ್ರಿ ಕುಮಾರಿ ದೀಕ್ಷಾ ಭಟ್ ಯಕ್ಷಗಾನದ ಮೂಲಕ ತಮ್ಮ ಪ್ರತಿಭೆಯನ್ನು ಚಿಕ್ಕದಾಗಿ ಚೊಕ್ಕದಾಗಿ ತೋರಿಸಿಕೊಟ್ಟು ದಕ್ಷಿಣ ಕನ್ನಡದ ಸಂಸ್ಕೃತಿಯನ್ನು ಮೆರೆದು ಜನ ಮನ್ನಣೆ ಪಡೆದರು. ಇಂತಹ ಪ್ರದರ್ಶನ ನಮ್ಮ ಬಳಗದಲ್ಲಿ ಬಂದದ್ದು ವಿಶೇಷ. ಹೀಗೆಯೇ ಇನ್ನಷ್ಟು ವಿಭಿನ್ನವಾದ ಶೈಲಿಯ ಪ್ರದರ್ಶನಗಳು ಬರುತ್ತಿರಲಿ ಎಂದು ಆಶಿಸುತ್ತೇವೆ.

"ಗಜಮುಖನೆ ಸಿದ್ಧಿದಾಯಕನೇ ವಂದಿಪೆ ಶರಣು" ಪ್ರಾರ್ಥನೆಯನ್ನು ವಿಭಿನ್ನವಾಗಿ ಹಿಂದೋಳ ರಾಗದಲ್ಲಿ ಹಾಡಿದ ಕುಮಾರಿ ಅರ್ಚಿಶ ಹೆಚ್. ರಾವ್ ಎಲ್ಲರ ವಿಶೇಷ ಮೆಚ್ಚುಗೆಗೆ ಪಾತ್ರರಾದರು. ಈ ಉದಯೋನ್ಮುಖ ಪ್ರತಿಭೆ 'ಜೀ ಸರಿಗಮ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಜನರ ಮೆಚ್ಚುಗೆಗೆ ಪಾತ್ರರಾಗಿದ್ದವರು.

ಗೌರವಾನ್ವಿತ ಮುಖ್ಯ ಅತಿಥಿಗಳಾದ ವೇದ ಬ್ರಹ್ಮ ವಿದ್ವಾನ್ ಶ್ರೀಯುತ ಬಿ. ವರದರಾಜ ತಂತ್ರಿಯವರು ನಮ್ಮ ಇಂದಿನ ಜೀವನಕ್ಕೆ ಅತ್ಯಗತ್ಯವಾದ ಏಕಾದಶಿಯ ಮಹತ್ವವನ್ನು ವಿವರಿಸಿದರು. ನಮ್ಮ ಸಂಸ್ಕೃತಿಯನ್ನು ಉಳಿಸುವ ಪ್ರಯತ್ನ ಮಾಡಬೇಕೆಂದು ತಿಳಿಸಿಕೊಟ್ಟರು. ಇಂತಹ ವಿದ್ವಾನರವರು ಬಳಗದ ಆಹ್ವಾನಕ್ಕೆ ಓಗೊಟ್ಟು ಬಂದದ್ದು ಕಾರ್ಯಕ್ರಮಕ್ಕೆ ಮೆರಗು ತಂದ ಹಾಗಾಯಿತು.

ನಮ್ಮೆಲ್ಲರ ನೆಚ್ಚಿನ ಅಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯರು ಬಳಗವನ್ನುದ್ದೇಶಿಸಿ ಎಂದಿನಂತೆ 'Short and sweet' ಆಗಿ ಮಾತನಾಡಿದರು, ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಯುತ ಎಂ.ಕೆ. ಗುರುಮೂರ್ತಿಯವರು ಬಹಳ ಅಚ್ಚುಕಟ್ಟಾಗಿ ಮಾಡಿದರು. ಹಾಗೆಯೇ ಆನಂದ ಬಳಗದ ಕಾರ್ಯದರ್ಶಿಯಾಗಿರುವ ಶ್ರೀ ಸತ್ಯನಾರಾಯಣ ಭಟ್ಟರು

## ನಿಮ್ಮ ಅನಿಸಿಕೆ

ಭೃಗುವಾಣಿಯಲ್ಲಿ ಪ್ರಕಟವಾಗಿರುವ ಕವನ, ಬರಹಗಳ ಬಗ್ಗೆ ನಿಮ್ಮ ಅನಿಸಿಕೆಯನ್ನು ಇಮೇಲ್ ಮುಖಾಂತರ ತಿಳಿಸಿದರೆ ಆಯ್ದ ಅನಿಸಿಕೆಯನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ನಿಮ್ಮ ಅನಿಸಿಕೆ ಬರಹಗಾರರಿಗೆ ಪ್ರೋತ್ಸಾಹ.

ಇಮೇಲ್ : krispa8888@gmail.com

ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಂದನಾರ್ಪಣೆಯನ್ನು ಆನಂದ ಬಳಗದ ಉಪಾಧ್ಯಕ್ಷರಾದ ಶ್ರೀ ಕೆ.ಎನ್. ಅಡಿಗರು ತಮ್ಮದೇ ಶೈಲಿಯಲ್ಲಿ ನಡೆಸಿಕೊಟ್ಟರು. ಆನಂದ ಬಳಗ ಸಾಂಸ್ಕೃತಿಕ ವಿಭಾಗದ ಸಂಚಾಲಕರಾದ ಶ್ರೀಯುತ ಟಿ.ಎಸ್. ನಾಗರಾಜ ಉಪಾಧ್ಯಾಯರವರ ಸರ್ವಾಂಗೀಣ ಮಾರ್ಗದರ್ಶನ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಹೆಚ್ಚಿನ ಮೆರುಗನ್ನು ನೀಡಿತ್ತು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲರಿಗೂ ಸ್ಮರಣಿಕೆಯನ್ನು ಕೊಟ್ಟು ಪ್ರೋತ್ಸಾಹಿಸಲಾಯಿತು.

ಕಾರ್ಯಕ್ರಮದ ಕಡೆಯ ಹಂತದ ಪೂಜೆಯನ್ನು ಶ್ರೀ ವೈ. ಜಯಂತ್ ರಾವ್ ಹಾಗೂ ಅವರ ಶಿಷ್ಯರಾದ ಶ್ರೀ ರಾಮಕೃಷ್ಣ ಪ್ರಸಾದ್ ಅವರು ವಿದ್ಯುಕ್ತವಾಗಿ ನೆರವೇರಿಸಿದರು. ದೇವರ ಮಂಟಪ, ಅಲಂಕಾರ, ಪೂಜಾ ವ್ಯವಸ್ಥೆ ಹಾಗೂ ರುಚಿ ಕಟ್ಟಾದ ಫಲಾಹಾರದ ವ್ಯವಸ್ಥೆ ಚೆನ್ನಾಗಿತ್ತು. ಬಳಗದ ಮೆಚ್ಚಿನ ಶ್ರೀ ಮಟ್ಟಿ ರಾಮಚಂದ್ರ ರಾವ್ ಎಂದಿನಂತೆ ಛಾಯಾಚಿತ್ರಗಳನ್ನು ಸದಸ್ಯರಿಗೆ ತಲುಪಿಸಿದರು. ಒಟ್ಟಾರೆ ವಸಂತೋತ್ಸವ ವಿಜೃಂಭಣೆಯಿಂದ ನೆರವೇರಿತು. ಹೀಗೆಯೇ ಮುಂಬರುವ ಕಾರ್ಯಕ್ರಮಗಳಲ್ಲಿಯೂ ಸದಸ್ಯರು ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂಬುದು ಎಲ್ಲರ ಆಸೆ. ❖

## ಆಗಸ್ಟ್–ಅಕ್ಟೋಬರ್ 2024ರ ವಿಶೇಷ ದಿನಗಳು

| | |
|---|---|
| **ಆಗಸ್ಟ್** | |
| 04, ಭಾನುವಾರ | ಭೀಮನ ಅಮಾವಾಸ್ಯೆ |
| 05, ಸೋಮವಾರ | ಶ್ರಾವಣ ಮಾಸ, ವರ್ಷ ಋತು ಆರಂಭ |
| 09, ಶುಕ್ರವಾರ | ನಾಗರ ಪಂಚಮಿ |
| 15, ಗುರುವಾರ | ಸ್ವಾತಂತ್ರ್ಯ ದಿನಾಚರಣೆ |
| 16, ಶುಕ್ರವಾರ | ಸಿಂಹ ಸಂಕ್ರಮಣ ವರಮಹಾಲಕ್ಷ್ಮೀ ವ್ರತ |
| 17, ಶನಿವಾರ | ದಧಿ ವ್ರತಾರಂಭ |
| 18, ಭಾನುವಾರ | ಪ್ರತಿಭಾ ಸ್ಪರ್ಧೆ |
| 19, ಸೋಮವಾರ | ಹುಣ್ಣಿಮೆ, ಋಗ್–ಯಜುರುಪಾಕರ್ಮ |
| 21, ಬುಧವಾರ | ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ |
| 26, ಸೋಮವಾರ | ಶ್ರೀ ಕೃಷ್ಣ ಜನ್ಮಾಷ್ಟಮಿ |
| 27, ಮಂಗಳವಾರ | ಶ್ರೀ ಕೃಷ್ಣ ಲೀಲೋತ್ಸವ |
| 29, ಗುರುವಾರ | ಏಕಾದಶೀ |
| **ಸೆಪ್ಟೆಂಬರ್** | |
| 03, ಸೋಮವಾರ | ಅಮಾವಾಸ್ಯೆ |
| 04, ಬುಧವಾರ | ಭಾದ್ರಪದ ಮಾಸಾರಂಭ |
| 05, ಗುರುವಾರ | ಸಾಮೋಪಕರ್ಮ |
| 06, ಶುಕ್ರವಾರ | ಗೌರೀ ತೃತೀಯಾ |
| 07, ಶನಿವಾರ | ಗಣೇಶ ಚತುರ್ಥಿ |
| 14, ಶನಿವಾರ | ಏಕಾದಶೀ |
| 15, ಭಾನುವಾರ | ಆನಂದ ಬಳಗದ ಪ್ರತಿಭಾ ಮೇಳ ಮತ್ತು ಪ್ರತಿಭಾ ಪುರಸ್ಕಾರ |
| 16, ಸೋಮವಾರ | ಕನ್ಯಾ ಸಂಕ್ರಮಣ, ಕ್ಷೀರ ವ್ರತಾರಂಭ |
| 17, ಮಂಗಳವಾರ | ಅನಂತ ಚತುರ್ದಶಿ |
| 18, ಬುಧವಾರ | ಹುಣ್ಣಿಮೆ |
| 19, ಗುರುವಾರ | ಪಿತೃಪಕ್ಷಾರಂಭ |
| 22, ಭಾನುವಾರ | ಬಳಗದ ಗಣೇಶೋತ್ಸವ |
| 28, ಶನಿವಾರ | ಏಕಾದಶೀ |
| **ಅಕ್ಟೋಬರ್** | |
| 02, ಬುಧವಾರ | ಮಹಾಲಯ ಅಮಾವಾಸ್ಯೆ |
| 03, ಗುರುವಾರ | ಆಶ್ವಯುಜ ಮಾಸ, ಶರದೃತು ಆರಂಭ ನವರಾತ್ರಿ ಆರಂಭ |
| 09, ಬುಧವಾರ | ಶಾರದಾ ಪೂಜಾರಂಭ |
| 12, ಶನಿವಾರ | ಮಹಾನವಮೀ |
| 13, ಭಾನುವಾರ | ವಿಜಯ ದಶಮಿ |
| 14, ಸೋಮವಾರ | ಏಕಾದಶೀ |
| 15, ಮಂಗಳವಾರ | ದ್ವಿದಳ ವ್ರತಾರಂಭ |
| 17, ಗುರುವಾರ | ತುಲಾ ಸಂಕ್ರಮಣ, ಹುಣ್ಣಿಮೆ, ವಾಲ್ಮೀಕಿ ಜಯಂತಿ |

(ಆಧಾರ : ಉಡುಪಿ ಶ್ರೀ ಪೂರ್ಣ ಪ್ರಜ್ಞ ಪಂಚಾಂಗಂ)

# ಶುಭ ವಿವಾಹ



ಶ್ರೀಮತಿ ಮೀನಾ ಹೆರ್ಳೆ ಮತ್ತು ಶ್ರೀ ಶಶಿಧರ ರಾವ್ ಇವರ ಮಗ ಚಿ. ಪ್ರಣವ್ ವಿವಾಹವು ಶ್ರೀಮತಿ ಉಮಾ ಮತ್ತು ಶ್ರೀ ಉಮೇಶ್‌ರವರ ಪುತ್ರಿ ಚಿ.ಸೌ. ಅಹನಾ ಅವರೊಂದಿಗೆ 14.04.2024ರಂದು ಜರುಗಿತು.



ಶ್ರೀಮತಿ ಅನುಪಮಾ ಮತ್ತು ಶ್ರೀ ಹರೀಶ್ ರಾವ್ ಇವರ ಮಗಳು ಚಿ.ಸೌ. ಸ್ನೇಹಾರಾವ್ ಇವರ ವಿವಾಹವು ಶ್ರೀಮತಿ ಪ್ರೇಮಾ ಆರ್. ಮತ್ತು ಶ್ರೀ ರಾಮಚಂದ್ರ ಯು.ರವರ ಮಗ ಚಿ.ರಾ. ಶೈಲೇಂದ್ರ ಅವರೊಂದಿಗೆ 03.01.2024ರಂದು ಜರುಗಿತು.

ಶ್ರೀಮತಿ ಉಷಾ ಮತ್ತು ಶ್ರೀ ಸುಬ್ರಹ್ಮಣ್ಯ ಉಂಗ್ರುಪುಳಿತ್ತಾಯ ಇವರ ಮಗ ಚಿ. ಶಶಾಂಕ್ ಅವರ ವಿವಾಹ ಶ್ರೀಮತಿ ಸಾಧನಾ ಹಾಗೂ ಅನಜೆ ಪದ್ಮನಾಭ ಹೆಬ್ಬಾರ್ ರವರ ಸುಪುತ್ರಿ ಚಿ.ಸೌ. ಪ್ರತೀಕ್ಷಾರೊಂದಿಗೆ 04.04.2024ರಂದು ಜರುಗಿತು.





ಬಳಗದ ಸದಸ್ಯರಾದ ಶ್ರೀ ದೇವಿ ಪ್ರಸಾದ್ ಸಂಪಿಗೆತ್ತಾಯ ಮತ್ತು ಶ್ರೀಮತಿ ಶ್ರೀವಲ್ಲಿ ದಂಪತಿಗಳ ಸುಪುತ್ರ ಚಿ. ಅಕ್ಷಯಕುಮಾರ ಸಂಪಿಗೆತ್ತಾಯ ಇವರ ವಿವಾಹ ಶ್ರೀಮತಿ ರೂಪ ಮತ್ತು ಶ್ರೀ ಗೋಪಾಲ ಕೃಷ್ಣ ಭಟ್‌ರವರ ಸುಪುತ್ರಿ ಸೌ. ದೀಕ್ಷಾ ಎಂಬ ವಧುವಿನೊಡನೆ ದಿ. 18.4.2024ರಂದು ಬನ್ನಡ್ಕದ ಪಾಂಚಜನ್ಯ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ಜರುಗಿದೆ.



ಬಳಗದ ಸದಸ್ಯರಾದ ಹಾಗೂ ಪೂರ್ಣಪ್ರಜ್ಞ ವಿದ್ಯಾಪೀಠದ ಪ್ರಧಾನ ಅರ್ಚಕರಾದ ವೇದಮೂರ್ತಿ ಶ್ರೀ ಶ್ರೀನಿವಾಸ ಮೂರ್ತಿ ಯು. ಮತ್ತು ಶ್ರೀಮತಿ ಸುಜಾತಾ ದಂಪತಿಗಳ ಸುಪುತ್ರಿ ಸೌ. ಸಮನಾ. ಇವರ ವಿವಾಹವು ಶ್ರೀ ಜಯಂತ ಬಾರಿತ್ತಾಯ ಮತ್ತು ಶ್ರೀಮತಿ ಗಾಯತ್ರೀ ದಂಪತಿಗಳ ಸುಪುತ್ರ ಚಿ. ಸುಬ್ರಹ್ಮಣ್ಯ ಎಂಬ ವರನೊಂದಿಗೆ ದಿ. 28.4.2024ರಂದು ಪೂರ್ಣ ಪ್ರಜ್ಞ ವಿದ್ಯಾಪೀಠದ ಸಭಾಂಗಣದಲ್ಲಿ ಅದ್ದೂರಿಯಿಂದ ನೆರವೇರಿದೆ.

# ANANDA BALAGA (R) BENGALURU

## EXECUTIVE COMMITTEE 2024-2026



**P.C Rao**
Vice President



**B Ramachandra Upadhya**
President



**K N Adiga Adoor**
Vice President



**M Sathyanarayana Bhat**
Secretary



**Gopalakrishna K**
Treasurer



**T S Nagaraja Upadhyaya**
Convener,
Cultural Committee



**Y. Jayantha Rao**
Convener,
Religious Committee



**Gururaj Pejavar**
Convener, Youth Wing



**M Dinesh Rao**
Convener, Membership
Development Committee



**M K Gurumurthy**
Convener,
Public Relation Wing



**A Sandeep Rao**
Convener,
Community Services Wing



**M. Krishna Prasad**
Editor, Bhrugu Vani



**Y Radhakrishna**
Convener, E.A.P.



**Ranjith Yadapadithaya**
Convener, Media & Comm.




**M. Ramachandra Rao**
Photography



**S Haridas Upadhya**
Member



**M Mohan Rao**
Member



**H Ramesh Bhat**
Member



**P N Vishnumurthy**
Member



**Dr. Veena Sharath**
Member



**Smt. Madhavi Ballal**
Member

---

**Past Presidents**
**Permanent Invitees**

Sri. S T R Mady
Sri. U A P Ballal
Sri. K Vasudeva Rao
Sri. P S Bagilthaya
Smt. Geetha Vasudeva Rao
Smt. S Vijayalakshmi Bhat

**Invitee Members**

Sri. Y Shreepathi Bhat
Sri. S N Sharathchandra
Sri. U V Krishna Murthy
Sri. S Jayaprakash Mady
Sri. B S Balachandra Tolpady
Sri. K Prakash Bhat
Sri. Madhava Upadhya
Sri. Matti Ramachandra Rao

Sri. B Sudhindra Rao
Sri. K Rajesh Bhat
Smt. Sudha M Rao
Smt. Geetha P R Rao
Smt. Vijayalaksmi Upadhya
Smt. Meena Mahabaleshwara
Smt. Shobha Radhakrishna
Smt. Sowmya K V

# G.V. ACHARYA & Co.

## CHARTERED ACCOUNTANTS

Partners : **G. Vamanacharya,** B.Com., F.C.A., **G.V. Shreesh Acharya,** B.Com., F.C.A., DISA

310, 3rd Floor, 9/1, Commerce House, Cunningham Road, Bangalore - 560 052
✆ : 22202065 / 22285903 e-mail : gvacharyaco@gmail.com web : www.cagvacharya.com


***Ref. :*** ***Date :***

# REPORT OF THE AUDITOR'S TO THE MEMBERS

We have Audited the attached Balance Sheet of **ANANDA BALAGA (R), NO.22 A, HOTEL AJANTHA, M.G. ROAD, BANGALORE-560001** as at 31st March 2024 and also the annexed Income and Expenditure Account and the Receipts and Payments Account for the year ended on that date and report that :

a. We have obtained all the information and explanations which to the best of out knowledge and belief were necessary for the purpose of our audit.

b. In our opinion, proper books of accounts have been kept by the Trust so far as appears from our examination of the books subject to our observation under Note on Accounts thereto.

c. The Balance sheet , the Income and Expenditure Account and the Receipts and Payments account dealt with in this report are in agreement with the books of account.

d. Subject to our observation under Note on Accounts and to the best of our information and according to the explanation given to us, the accounts given true and fair view.

1. In the case of the Balance Sheet of the State of the Trust's affairs as at 31st March 2024.

2. In the case of the Income and Expenditure account, of the excess of Income over the Expenditure for the year ended on that dates and.

3. In the case of Receipts and Payments account, of the each receipt and payment during the year ended on that date.

For G.V. ACHARYA & CO.,
Chartered Accountants,

G. Vamanacharya
(G. VAMANACHARYA F.C.A.)
PARTNER
Mem no. :009850
FRN no: 000029S

Place : Bangalore
Date : 26.06.2024

**UDIN: 24009850BKBIIT7556**

**ANANDA BALAGA ( R )**

**RECEIPTS AND PAYMENTS ACCOUNT FOR THE YEAR 2023-2024**

| 31.3.2023 | | Receipts | 31.3.2024 | 31.3.2023 | | Payments | 31.3.2024 |
|---|---|---|---|---|---|---|---|
| | To | **Opening Balances :** | . | | By | **Ananda Balaga** | - |
| | | **Ananda Balaga** | | 282,261.00 | " | Printing charges | 313,490.00 |
| - | " | Cash in hand | - | 958.00 | " | Bank Charges | 14.00 |
| 191,150.00 | " | Karnataka Bank - Nehru nagar | 273,138.00 | 378,505.00 | | Cultural Program Expenses | 277,673.00 |
| 131,848.00 | " | Karnataka Bank - EAP | 430,108.00 | 260,000.00 | | Education Assistance disbursed | 280,000.00 |
| | | **Mahila Vibhaga** | | 3,957.00 | | TDS Paid | 5,872.00 |
| 16,783.00 | | Cash in hand | -- | 21,000.00 | " | Website renewal and sms charges | 9,000.00 |
